ಸಂಪುಟ 01 | ಸಂಚಿಕೆ 187 ಸೋಮವಾರ 12 ಅಕ್ಟೋಬರ್ 2026 | ಪುಟ 4 | ಬೆಲೆ–2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ವಿಶ್ವ ಸಂಧಿವಾತ ದಿನ (World Arthritis Day): ಸಂಧಿವಾತ (ಒಡಿಣುಡಿಣು) ರೋಗದ ಲಕ್ಷಣಗಳು, ಅದರ ಪ್ರಭಾವ ಮತ್ತು ತಡೆಗಟ್ಟುವಿಕೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಪ್ರತಿ ವರ್ಷ ಈ ದಿನವನ್ನು ಆಚರಿಸಲಾಗುತ್ತದೆ.

2) ರಾಷ್ಟ್ರೀಯ ರೈತರ ದಿನ (National Farmer's Day): ಅಮೆರಿಕ ಸೇರಿದಂತೆ ಹಲವು ದೇಶಗಳಲ್ಲಿ ಕೃಷಿ ವಲಯ ಹಾಗೂ ರೈತರ ಶ್ರಮವನ್ನು ಗೌರವಿಸಲು ಈ ದಿನವನ್ನು 'ಫಾರ್ಮರ್ಸ್ ಡೇ' ಆಗಿ ಆಚರಿಸಲಾಗುತ್ತದೆ.

3) ಕೊಲಂಬಸ್ ದಿನ / ಸ್ಥಳೀಯ ನಿವಾಸಿಗಳ ದಿನ (Columbus Day / Indigenous People's Day): ಕ್ರಿಸ್ಟೋಫರ್ ಕೊಲಂಬಸ್ 1492ರಲ್ಲಿ ಅಮೆರಿಕ ತಲುಪಿದ ನೆನಪಿಗಾಗಿ ಅಮೆರಿಕ ಮತ್ತು ಸ್ಪೇನ್ ದೇಶಗಳಲ್ಲಿ ಈ ದಿನವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಕೆಲವು ಕಡೆ ಇದನ್ನು ಸ್ಥಳೀಯ ಸಂಸ್ಕೃತಿಗಳನ್ನು ಗೌರವಿಸುವ ದಿನವಾಗಿ ಆಚರಿಸುತ್ತಾರೆ.

4)ಶರನ್ನವರಾತ್ರಿಯ ಎರಡನೇ ದಿನ – 2026ರ ಅಕ್ಟೋಬರ್ 12ರಂದು ನವರಾತ್ರಿಯ ಎರಡನೇ ದಿನವಾಗಿದ್ದು, ತಾಯಿ ಬ್ರಹ್ಮಚಾರಿಣಿಯನ್ನು ಆರಾಧಿಸಲಾಗುತ್ತದೆ.

ಸುಭಾಷಿತ

"ಬದುಕಿನಲ್ಲಿ ಬರುವ ಕಷ್ಟಗಳು ನಿನ್ನನ್ನು ಮುರಿಯಲು ಅಲ್ಲ, ಬದಲಿಗೆ ನಿನ್ನ ಶಕ್ತಿಯನ್ನು ಅರಿಯಲು."

– ರವೀಂದ್ರನಾಥ ಟ್ಯಾಗೋರ್

ಕಂಪ್ಲಿ:ಜಾಮೀಯಾ ಮಸೀದಿಯಲ್ಲಿ 'ಮುಯೇ ಮುಬಾರಕ್' ಪವಿತ್ರ ದರ್ಶನ ಭಾಗ್ಯ; ಗ್ಯಾರ್ವಿ ಶರೀಫ್ ಸಂಭ್ರಮ

❑ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ತಾಲೂಕಿನಾದ್ಯಂತ ಗ್ಯಾರ್ವಿ ಶರೀಫ್ ಹಬ್ಬದ ಸಡಗರ ಮನೆಮಾಡಿದ್ದು, ಪಟ್ಟಣದ 5ನೇ ವಾರ್ಡಿನ ಇಂದಿರಾನಗರದ ಇತಿಹಾಸ ಪ್ರಸಿದ್ಧ ಜಾಮೀಯಾ (ಮಹ್ಮದೀಯ) ಮಸೀದಿಯಲ್ಲಿ ಶನಿವಾರ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ಜರುಗಿದವು. ಹಬ್ಬದ ಅಂಗವಾಗಿ ಮಸೀದಿಯಲ್ಲಿ ಹಜರತ್ ಮಹ್ಮದ್ ಸಲ್ಲಲ್ಲಾವುವಾ ಸಲ್ಲಂ ಹಾಗೂ ಹುಜೂರ್ ಪಿರಾನೆ ಪೀರ್ ಗೌಸೇ ಅಜಂ ದಸ್ತಗೀರ್ ರವರ 'ಮುಯೇ ಮುಬಾರಕ್' (ಪವಿತ್ರ ಕೇಶ) ದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.ಧಾರ್ಮಿಕ ಇತಿಹಾಸ ಹೊಂದಿರುವ ಮುಯೇ ಮುಬಾರಕ್‌ನ ಪವಿತ್ರ ದರ್ಶನವನ್ನು ಪಡೆಯಲು ಶನಿವಾರ ಸಂಜೆಯಿಂದಲೆ ಮಸೀದಿಗೆ ಮುಸ್ಲಿಂ ಬಾಂಧವರು ಭಕ್ತಾದಿಗಳು ತಂಡೋಪತಂಡವಾಗಿ ಆಗಮಿಸಿದರು. ಹೂವು ಹಾಗೂ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದ್ದ ಮಸೀದಿಯಲ್ಲಿ ವಿಶೇಷ ಪ್ರಾರ್ಥನೆಗಳು ನಡೆದವು.ಈ ವಿಶಿಷ್ಟ ಧಾರ್ಮಿಕ ಮಹೋತ್ಸವವು ಮುಸ್ಲಿಂ ಸಮುದಾಯದ ಪ್ರಮುಖ ಧರ್ಮಗುರುಗಳ ದಿವ್ಯ ಸಾನಿಧ್ಯದಲ್ಲಿ ನೆರವೇರಿತು. ಕಂಪ್ಲಿಯ ಸಜ್ಜಾದೆ ನಶೀನ್ ಸೈಯದ್ ಷಾ ಅಬುಲ್ ಹಸನ್ ಖಾದ್ರಿ ಉರ್ಫ್ ಅಜಮ್ ಸಾಹೇಬ್ ದಿವಾನ ಖಾನಾ, ಸೈಯದ್ ಷಾ ಅಬ್ದುಲ್ ಖಾದರ್ ಖಾದ್ರಿ ಉರೂಫ್ ಮುಕ್ತಾರ್ ಸಾಹೇಬ್ ಉಂ ಸಜ್ಜಾದೆ ನಶೀನ್ ದಿವಾನ ಖಾನಾ, ಸೈಯದ್ ಷಾ ಗೇಸುದರಾಸ್ ಖಾದ್ರಿ ಬಿರದರೆ ಸಜ್ಜಾದೆ ನಶೀನ್ ದಿವಾನ ಖಾನಾ ಹಾಗೂ ಸೈಯದ್ ಉಮೇಶ್ ಸಾಹೇಬ್ ಖಾದ್ರಿ ದಿವಾನ ಖಾನೆ, ಕಂಪ್ಲಿ ಮತ್ತು ತೆಕ್ಕಲಕೋಟೆಯ ಧರ್ಮಗುರುಗಳಾದ ಸೈಯದ್ ಮೊಹಿದ್ದೀನ್ ಖಾದ್ರಿ ಅವರು ಪಾಲ್ಗೊಂಡು ಭಕ್ತಾದಿಗಳಿಗೆ ಆಶೀರ್ವಚನ ನೀಡಿ, ಸಮಾಜದಲ್ಲಿ ಶಾಂತಿ, ಸೌಹಾರ್ದತೆ ನೆಲೆಸಲೆಂದು ದುವಾ (ಪ್ರಾರ್ಥನೆ) ಮಾಡಿದರು.ಸ್ಥಳೀಯ 5ನೇ ವಾರ್ಡ್ ಮಾತ್ರವಲ್ಲದೆ ಪಟ್ಟಣದಲ್ಲಿನ ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪವಿತ್ರ ದರ್ಶನ ಪಡೆದು ಪುನೀತರಾದರು.ಮಹಿಳೆಯರು ಮತ್ತು ಮಕ್ಕಳು ಸರದಿಯಲ್ಲಿ ನಿಂತು ಮುಯೇ ಮುಬಾರಕ್ ದರ್ಶನ ಪಡೆದರು. ಮಸೀದಿ ವತಿಯಿಂದ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು, ಸೂಕ್ತ ವ್ಯವಸ್ಥೆ ಮಾಡಲಾಗಿತ್ತು.ಈ ಸಂದರ್ಭದಲ್ಲಿ ಜಾಮೀಯಾ ಮಸೀದಿ ಕಮಿಟಿಯ ಅಧ್ಯಕ್ಷರಾದ ಬಿ. ಜಿಲಾನಸಾಬ್, ಕಾರ್ಯದರ್ಶಿ ಸಿ. ಕೆ. ಮೆಹಬೂಬ್ ಬಾಷಾ, ಪ್ರಮುಖ ಮುಖಂಡರಾದ ಬಿ. ರಾಜಾವಲಿ, ಅಜರುದ್ದೀನ್, ಕೈಸರ್‌ಬಾಷಾ, ತಸ್ಲೀಂಬಾಷಾ, ಮಹ್ಮದ್‌ಗೌಸ್, ನೂರ್ ಅಹ್ಮದ್, ಮಹ್ಮದ್‌ಗೌಸ್ ಜಿಲಾನ್, ಅನ್ಸಾರ್ ಸೇರಿದಂತೆ ಸಮುದಾಯದ ಹಿರಿಯರು, ಯುವಕರು ಮತ್ತು ನೂರಾರು ಸಾರ್ವಜನಿಕರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.ವರದಿ : ಜಿಲಾನಸಾಬ್ ಬಡಿಗೇರ್

ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳಿಂದ ದಸರಾ ಉದ್ಘಾಟನೆ - ಕೊಪ್ಪಳದ ಕೀರ್ತಿಗೆ ಮತ್ತೊಂದು ಗರಿ

ಮನುಷ್ಯನನ್ನು ಮನುಷ್ಯನಂತೆ ಪ್ರೀತಿಸುವುದೇ ನಿಜವಾದ ಧರ್ಮ:ಗವಿಶ್ರೀ

❑ ನೈಜ್ಯ ದೆಸೆ ನ್ಯೂಸ್





ಮೈಸೂರು:ಕರ್ನಾಟಕದ ಹೆಮ್ಮೆಯ ನಾಡಹಬ್ಬ, ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ–2026ರ ಉದ್ಘಾಟನೆಯ ಸಂದರ್ಭದಲ್ಲಿ ಕೊಪ್ಪಳದ ಸಂಸ್ಥಾನ ಶ್ರೀ ಗವಿಮಠದ 18ನೇ ಪೀಠಾಧಿಪತಿಗಳಾದ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ವಿಶೇಷ ಗಮನ ಸೆಳೆದಿದ್ದಾರೆ. ಶ್ರೀಗಳ ಸಾನ್ನಿಧ್ಯದಲ್ಲಿ ದಸರಾ ಮಹೋತ್ಸವಕ್ಕೆ ಚಾಲನೆ ದೊರೆತಿರುವುದು ಕೊಪ್ಪಳದ ಭಕ್ತರು ಹಾಗೂ ಉತ್ತರ ಕರ್ನಾಟಕದ ಜನರಲ್ಲಿ ಸಂಭ್ರಮ ಮತ್ತು ಹೆಮ್ಮೆಯ ಭಾವನೆ ಮೂಡಿಸಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶ್ರೀಗಳ ಆಶೀರ್ವಾದ ಪಡೆದಿರುವುದು ಈ ಸಂದರ್ಭದ ಪ್ರಮುಖ ಆಕರ್ಷಣೆಯಾಗಿದೆ. ಧಾರ್ಮಿಕ ಪರಂಪರೆ, ಸಾಂಸ್ಕೃತಿಕ ವೈಭವ ಮತ್ತು ಸಮಾಜಸೇವೆಯ ಮೌಲ್ಯಗಳನ್ನು ಒಟ್ಟುಗೂಡಿಸುವ ಈ ಸಂದರ್ಭದಲ್ಲಿ ಗವಿಮಠದ ಸೇವಾ ಪರಂಪರೆಯ ಮಹತ್ವ ಮತ್ತೊಮ್ಮೆ ನೆನಪಾಗಿದೆ.ಪರ್ವತಯ್ಯನಿಂದ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳವರೆಗೆ 1977ರ ಜೂನ್ 1ರಂದು ಕಲಬುರಗಿ ಜಿಲ್ಲೆಯ ಹಾಗರಗುಂಡಗಿ ಗ್ರಾಮದಲ್ಲಿ ಜನಿಸಿದ ಶ್ರೀಗಳ ಪೂರ್ವಾಶ್ರಮದ ಹೆಸರು ಪರ್ವತಯ್ಯ. ನೀಲಯ್ಯ ಹಿರೇಮಠ ಮತ್ತು ಈರಮ್ಮ ದಂಪತಿಯ ಪುತ್ರರಾಗಿ ಜನಿಸಿದ ಅವರು, ಬಡತನದ ನಡುವೆಯೂ ಶಿಕ್ಷಣ ಪಡೆಯುವ ಉತ್ಕಟ ಆಸೆಯಿಂದ ಕೊಪ್ಪಳದ ಗವಿಮಠಕ್ಕೆ ಆಗಮಿಸಿದರು.ಮಠದ ಪರಿಸರದಲ್ಲಿ ವಿದ್ಯಾಭ್ಯಾಸ ಮುಂದುವರಿಸಿದ ಅವರು, ಗುರುಗಳ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ಬದುಕಿನತ್ತ ಹೆಜ್ಜೆ ಹಾಕಿದರು. 17ನೇ ಪೀಠಾಧಿಪತಿಗಳಾದ ಶ್ರೀ ಶಿವಶಾಂತವೀರ ಮಹಾಸ್ವಾಮಿಗಳ ಕೃಪಾಶೀರ್ವಾದ ಪಡೆದ ಅವರು, 2002ರ ಡಿಸೆಂಬರ್ 13ರಂದು ಗವಿಮಠದ 18ನೇ ಪೀಠಾಧಿಪತಿಗಳಾಗಿ ಪೀಠಾರೋಹಣ ಮಾಡಿದರು.ಸಾಮಾನ್ಯ ಹಿನ್ನೆಲೆಯಿಂದ ಆಧ್ಯಾತ್ಮಿಕ ನಾಯಕತ್ವದ ಹಂತಕ್ಕೆ ಬೆಳೆದ ಈ ಜೀವನಯಾನವು ಪರಿಶ್ರಮ, ಶಿಕ್ಷಣ, ಗುರುಭಕ್ತಿ ಮತ್ತು ಸಮರ್ಪಣೆಯ ಮಹತ್ವವನ್ನು ಸಾರುತ್ತದೆ.ಗವಿಮಠದ ಶಕ್ತಿ – ದಾಸೋಹ ಮತ್ತು ಶಿಕ್ಷಣದ ಕ್ರಾಂತಿ ಗವಿಮಠದ ಸೇವಾ ಪರಂಪರೆಯಲ್ಲಿ ತ್ರಿವಿಧ ದಾಸೋಹಕ್ಕೆ ಮಹತ್ವದ ಸ್ಥಾನವಿದೆ. ಅನ್ನದಾಸೋಹ:** ಹಸಿದವರಿಗೆ ಅನ್ನ ನೀಡುವ ಮೂಲಕ ಮಾನವೀಯ ಸೇವೆ.ಜ್ಞಾನದಾಸೋಹ:** ಜ್ಞಾನ ಮತ್ತು ಮೌಲ್ಯಯುತ ಚಿಂತನೆಗಳನ್ನು ಸಮಾಜಕ್ಕೆ ತಲುಪಿಸುವುದು. ಅಕ್ಷರದಾಸೋಹ:* ಬಡ ಮತ್ತು ಹಿಂದುಳಿದ ಮಕ್ಕಳಿಗೆ ಶಿಕ್ಷಣದ ಅವಕಾಶಗಳನ್ನು ಕಲ್ಪಿಸುವುದು.ಈ ಮೂರು ಸೇವೆಗಳೂ ಸಮಾಜದ ಸಮಗ್ರ ಅಭಿವೃದ್ಧಿಗೆ ದಾರಿ ತೋರಿಸುತ್ತವೆ. ಶಿಕ್ಷಣದ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸುವುದು, ಬಡತನದಿಂದ ಹೊರಬರುವ ಅವಕಾಶ ಕಲ್ಪಿಸುವುದು ಮತ್ತು ಸಮಾಜದಲ್ಲಿ ಸಮಾನತೆಯ ಭಾವನೆ ಮೂಡಿಸುವುದು ಇವುಗಳ ಉದ್ದೇಶವಾಗಿದೆ.ಹಸಿದ ಹೊಟ್ಟೆಗೆ ಅನ್ನ, ಅಜ್ಞಾನದ ಕತ್ತಲೆಗೆ ಜ್ಞಾನ, ಭವಿಷ್ಯಕ್ಕೆ ಶಿಕ್ಷಣ – ಇದೇ ದಾಸೋಹದ ನಿಜವಾದ ಮಹತ್ವ ಜಲಸಂರಕ್ಷಣೆಯ ಮೂಲಕ ಜನಜೀವನಕ್ಕೆ ಕೊಡುಗೆ ನೀರು ಜೀವದ ಮೂಲ. ಜಲಮೂಲಗಳ ಸಂರಕ್ಷಣೆ ಮುಂದಿನ ಪೀಳಿಗೆಯ ಬದುಕಿಗೆ ಅತ್ಯಗತ್ಯ. ಹಿರೇಹಳ್ಳದ ಪುನಶ್ಚೇತನಕ್ಕೆ ಸಂಬಂಧಿಸಿದ ಜನಭಾಗಿತ್ವದ ಪ್ರಯತ್ನಗಳು ಜಲಸಂರಕ್ಷಣೆ ಮತ್ತು ಪರಿಸರ ಕಾಳಜಿಯ ಮಹತ್ವವನ್ನು ಜನರಿಗೆ ಪರಿಚಯಿಸಿವೆ. ಜಲಮೂಲಗಳನ್ನು ಉಳಿಸುವುದು, ಮಳೆನೀರನ್ನು ಸಂರಕ್ಷಿಸುವುದು, ಮರಗಳನ್ನು ಬೆಳೆಸುವುದು ಮತ್ತು ಪ್ರಕೃತಿಯೊಂದಿಗೆ ಜವಾಬ್ದಾರಿಯುತ ಸಂಬಂಧ ಹೊಂದುವುದು ಇಂದಿನ ಸಮಾಜದ ಪ್ರಮುಖ ಅಗತ್ಯಗಳಾಗಿವೆ. ಜಲಸಂರಕ್ಷಣೆಯ ಕಾರ್ಯಗಳ ಹಿನ್ನೆಲೆಯಲ್ಲಿ ಶ್ರೀಗಳನ್ನು ಅನೇಕರು **ಜಲಋಷಿ* ಎಂದು ಪ್ರೀತಿಯಿಂದ ಕರೆಯುತ್ತಾರೆ. ಆಧ್ಯಾತ್ಮಿಕತೆಯ ಜೊತೆಗೆ ಪರಿಸರದ ಬಗ್ಗೆ ಕಾಳಜಿ ವಹಿಸುವುದು ಸಮಾಜಸೇವೆಯ ವಿಶಾಲ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ.ಧರ್ಮದ ಜೊತೆಗೆ ಮಾನವೀಯತೆ ಮತ್ತು ಸಾಮಾಜಿಕ ಹೊಣೆಗಾರಿಕೆ ಬಾಲ್ಯವಿವಾಹ ತಡೆ, ನೇತ್ರದಾನ, ಅಂಗಾಂಗ ದಾನ, ವೃಕ್ಷಾರೋಪಣ ಮತ್ತು ಪರಿಸರ ಜಾಗೃತಿಯಂತಹ ವಿಷಯಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರುವ ಮಹತ್ವದ ಪ್ರಯತ್ನಗಳಾಗಿವೆ. ಧಾರ್ಮಿಕ ಆಚರಣೆಗಳು ಮನುಷ್ಯನಲ್ಲಿ ಕರುಣೆ, ಸೇವಾಭಾವ, ಶಿಸ್ತು ಮತ್ತು ಪರೋಪಕಾರದ ಮನೋಭಾವವನ್ನು ಬೆಳೆಸಬೇಕು. ಸಮಾಜದ ದುರ್ಬಲ ವರ್ಗಗಳಿಗೆ ನೆರವಾಗುವುದು, ಮಕ್ಕಳ ಶಿಕ್ಷಣಕ್ಕೆ ಬೆಂಬಲ ನೀಡುವುದು ಮತ್ತು ಪ್ರಕೃತಿಯನ್ನು ರಕ್ಷಿಸುವುದು ಧಾರ್ಮಿಕ ಮೌಲ್ಯಗಳ ಸಾಮಾಜಿಕ ಅಭಿವ್ಯಕ್ತಿಯಾಗಿದೆ.ಮೈಸೂರು ದಸರಾ – ಕರ್ನಾಟಕದ ಸಾಂಸ್ಕೃತಿಕ ಆತ್ಮಗೌರವ ಮೈಸೂರು ದಸರಾ ಶತಮಾನಗಳ ಪರಂಪರೆ, ಅರಮನೆಯ ವೈಭವ, ಕಲಾ ಸಂಭ್ರಮ ಮತ್ತು ಜನಸಾಮಾನ್ಯರ ಉತ್ಸವದ ಸಂಕೇತವಾಗಿದೆ. ನಾಡಿನ ವಿವಿಧ ಭಾಗಗಳ ಸಂಸ್ಕೃತಿ, ಸಂಪ್ರದಾಯ ಮತ್ತು ಆಧ್ಯಾತ್ಮಿಕ ಪರಂಪರೆಗಳಿಗೆ ಈ ಮಹೋತ್ಸವದಲ್ಲಿ ವಿಶೇಷ ಸ್ಥಾನವಿದೆ. ಇಂತಹ ಐತಿಹಾಸಿಕ ಮಹೋತ್ಸವದ ಉದ್ಘಾಟನೆಯಲ್ಲಿ ಕೊಪ್ಪಳದ ಗವಿಮಠದ ಶ್ರೀಗಳು ಭಾಗವಹಿಸಿರುವುದು ಉತ್ತರ ಕರ್ನಾಟಕದ ಭಕ್ತರಿಗೆ ಸಂತಸದ ಸಂಗತಿಯಾಗಿದೆ. ಕೊಪ್ಪಳದ ಗವಿಮಠವು ಶಿಕ್ಷಣ ಮತ್ತು ದಾಸೋಹದ ಮೂಲಕ ಜನರೊಂದಿಗೆ ಬೆಸೆದುಕೊಂಡಿರುವ ಧಾರ್ಮಿಕ ಸಂಸ್ಥೆಯಾಗಿದೆ. ಮೈಸೂರು ದಸರಾ ವೇದಿಕೆಯಲ್ಲಿ ಶ್ರೀಗಳ ಸಾನ್ನಿಧ್ಯವು ಈ ಸೇವಾ ಪರಂಪರೆಯ ಕುರಿತು ಹೆಚ್ಚಿನ ಜನರಲ್ಲಿ ಆಸಕ್ತಿ ಮೂಡಿಸುವ ಸಂದರ್ಭವಾಗಿದೆ.ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಂದ ಆಶೀರ್ವಾದ ದಸರಾ ಮಹೋತ್ಸವದ ಸಂದರ್ಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳ ಆಶೀರ್ವಾದ ಪಡೆದಿರುವುದು ಗಮನಾರ್ಹವಾಗಿದೆ.ನಾಡಿನ ಪ್ರಮುಖ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಧ್ಯಾತ್ಮಿಕ ಪರಂಪರೆ ಮತ್ತು ಸಾಮಾಜಿಕ ಸೇವೆಯ ಮಹತ್ವವೂ ಪ್ರತಿಫಲಿಸುತ್ತದೆ. ಇಂತಹ ಸಂದರ್ಭಗಳು ಸಮಾಜದಲ್ಲಿ ಪರಸ್ಪರ ಗೌರವ, ಸಹಬಾಳ್ವೆ ಮತ್ತು ಸೌಹಾರ್ದತೆಯ ಸಂದೇಶವನ್ನು ಬಲಪಡಿಸಲಿ ಎಂಬುದು ಜನರ ಆಶಯವಾಗಿದೆ.ಯುವಜನತೆಗೆ ಸ್ಫೂರ್ತಿಯಾಗಲಿ ಶ್ರೀಗಳ ಜೀವನ ಇಂದಿನ ಯುವಜನತೆಗೆ ಶ್ರೀಗಳ ಜೀವನಯಾನ ಹಲವು ಸಂದೇಶಗಳನ್ನು ನೀಡುತ್ತದೆ:ಶಿಕ್ಷಣವೇ ಬೆಳವಣಿಗೆಯ ದಾರಿ. ಗುರುಗಳ ಮಾರ್ಗದರ್ಶನ ಬದುಕಿಗೆ ದಿಕ್ಕು ನೀಡುತ್ತದೆ. ಸೇವೆಯೇ ಸಮಾಜವನ್ನು ಬೆಸೆಯುವ ಶಕ್ತಿ. ಮಾನವೀಯತೆಯೇ ಎಲ್ಲ ಧರ್ಮಗಳ ಮೂಲ ಮೌಲ್ಯ.ಯುವಕರು ತಮ್ಮ ವಿದ್ಯಾಭ್ಯಾಸದ ಜೊತೆಗೆ ಸಮಾಜದ ಬಗ್ಗೆ ಕಾಳಜಿ ಬೆಳೆಸಿಕೊಂಡು, ಪರಿಸರ ಸಂರಕ್ಷಣೆ, ಬಡ ವಿದ್ಯಾರ್ಥಿಗಳಿಗೆ ನೆರವು ಮತ್ತು ಸಾರ್ವಜನಿಕ ಸೇವೆಯಲ್ಲಿ ಪಾಲ್ಗೊಳ್ಳಬೇಕು ಎಂಬ ಸಕಾರಾತ್ಮಕ ಪ್ರೇರಣೆಯನ್ನು ಇಂತಹ ಕಾರ್ಯಗಳಿಂದ ಪಡೆಯಬಹುದು. ಕೊಪ್ಪಳದ ಹೆಮ್ಮೆ, ಉತ್ತರ ಕರ್ನಾಟಕದ ಹೆಮ್ಮೆ, ಕನ್ನಡಿಗರ ಹೆಮ್ಮೆ ಮೈಸೂರು ದಸರಾ–2026ರ ಈ ಸಂದರ್ಭವು ಕೊಪ್ಪಳದ ಗವಿಮಠದ ಅನುಯಾಯಿಗಳಿಗೆ ಭಾವನಾತ್ಮಕವಾಗಿ ಮಹತ್ವದ ಕ್ಷಣವಾಗಿದೆ. ಗವಿಮಠದ ಶಿಕ್ಷಣ, ದಾಸೋಹ, ಜಲಸಂರಕ್ಷಣೆ ಮತ್ತು ಸಮಾಜಸೇವೆಯ ಕಾರ್ಯಗಳು ಮುಂದಿನ ದಿನಗಳಲ್ಲಿಯೂ ಜನರಿಗೆ ಪ್ರೇರಣೆಯಾಗಲಿ.ನಾಡಿನಲ್ಲಿ ಶಾಂತಿ ನೆಲೆಸಲಿ, ರೈತರ ಬದುಕು ಸಮೃದ್ಧವಾಗಲಿ, ಬಡ ಮಕ್ಕಳಿಗೆ ಶಿಕ್ಷಣ ದೊರೆಯಲಿ, ಯುವಜನರಿಗೆ ಉತ್ತಮ ಭವಿಷ್ಯ ಸಿಗಲಿ ಮತ್ತು ಮಾನವೀಯತೆಯ ಮೌಲ್ಯಗಳು ಮನೆಮನೆಗೂ ತಲುಪಲಿ ಎಂದು ಪ್ರಾರ್ಥಿಸೋಣ.ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳಿಗೆ ಭಕ್ತಿಪೂರ್ವಕ ಪ್ರಣಾಮಗಳು

ಕವಿತಾಳದ ಹಿರಿಯ ವೈದ್ಯ ಡಾ. ಎನ್. ಜಿ. ಹಜಾರಿ ವಿಧಿವಶ

ವೈದ್ಯಕೀಯ ಕ್ಷೇತ್ರದಲ್ಲಿ 51 ವರ್ಷಗಳ ಕಾಲ ಅಮೂಲ್ಯ ಸೇವೆ ಸಲ್ಲಿಸಿದ್ದ ಹಿರಿಯ ವೈದ್ಯರಿಗೆ ಭಾವಪೂರ್ಣ ಶ್ರದ್ಧಾಂಜಲಿ

❑ ನೈಜ್ಯ ದೆಸೆ ನ್ಯೂಸ್



ಕವಿತಾಳ:ರಜಪೂತ ಸಮಾಜದ ಹಿರಿಯರು ಹಾಗೂ ಖ್ಯಾತ ವೈದ್ಯರಾದ ಡಾ. ಎನ್. ಜಿ. ಹಜಾರಿ (MBBS) ಅವರು ಭಾನುವಾರ ಸಂಜೆ 5:15 ಗಂಟೆಗೆ ವಿಧಿವಶರಾದರು.ವೈದ್ಯಕೀಯ ವೃತ್ತಿಯಲ್ಲಿ ಸುಮಾರು 51 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದ ಡಾ. ಎನ್. ಜಿ. ಹಜಾರಿ** ಅವರು ತಮ್ಮ ವೃತ್ತಿಜೀವನದಲ್ಲಿ ಅನೇಕ ರೋಗಿಗಳಿಗೆ ಚಿಕಿತ್ಸೆ ನೀಡಿ, ಜನರ ಆರೋಗ್ಯ ಸೇವೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ವೈದ್ಯಕೀಯ ಕ್ಷೇತ್ರದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ ಅವರು, ಸಮಾಜದಲ್ಲಿ ಗೌರವಾನ್ವಿತ ಹಿರಿಯರಾಗಿ ಗುರುತಿಸಿಕೊಂಡಿದ್ದರು. ವೈದ್ಯಕೀಯ ಸೇವೆಯ ಮೂಲಕ ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಾ, ರೋಗಿಗಳಿಗೆ ನೆರವಾಗುವ ಮೂಲಕ ತಮ್ಮದೇ ಆದ ಸೇವಾ ಛಾಪನ್ನು ಮೂಡಿಸಿದ್ದರು. ಅವರ ಸುದೀರ್ಘ ವೃತ್ತಿಜೀವನ ಮತ್ತು ಸಮಾಜದೊಂದಿಗಿನ ಒಡನಾಟ ಸ್ಮರಣೀಯವಾಗಿದೆ. ಅವರ ನಿಧನವು ರಜಪೂತ ಸಮಾಜಕ್ಕೆ ಹಾಗೂ ಅವರನ್ನು ಗೌರವಿಸುತ್ತಿದ್ದ ಅಪಾರ ಜನರಿಗೆ ತುಂಬಲಾರದ ನಷ್ಟವಾಗಿದೆ.ಮೃತರ ಅಂತ್ಯಕ್ರಿಯೆಯು ಸೋಮವಾರ ರಜಪೂತ ಸಮಾಜದ ಸಂಪ್ರದಾಯ ಹಾಗೂ ವಿಧಿ ವಿಧಾನಗಳ ಪ್ರಕಾರ ನೆರವೇರಲಿದೆ ಎಂದು ತಿಳಿದುಬಂದಿದೆ.ಡಾ. ಎನ್. ಜಿ. ಹಜಾರಿ ಅವರ ನಿಧನಕ್ಕೆ ರಜಪೂತ ಸಮಾಜದ ಗಣ್ಯರು, ವೈದ್ಯಕೀಯ ಕ್ಷೇತ್ರದ ಸಹೋದ್ಯೋಗಿಗಳು, ಬಂಧುಗಳು ಹಾಗೂ ಹಿತೈಷಿಗಳು ತೀವ್ರ ಸಂತಾಪ ಸೂಚಿಸಿದ್ದಾರೆ.ಆರು ದಶಕಗಳ ವೈದ್ಯಕೀಯ ಸೇವೆಯ ಮೂಲಕ ಜನರ ಮನದಲ್ಲಿ ನೆಲೆಸಿದ್ದ ಹಿರಿಯ ವೈದ್ಯರ ಸ್ಮರಣೆ ಸದಾ ಚಿರಸ್ಥಾಯಿಯಾಗಿರಲಿ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇವೆ.ಭಾವಪೂರ್ಣ ಶ್ರದ್ಧಾಂಜಲಿ. ಓಂ ಶಾಂತಿ

ಸಾಹಿತ್ಯ ಸಿಂಚನ

ಜ್ಞಾನ ದಾಸೋಹದ ಜೋಳಿಗೆ

ಸಂಸ್ಕಾರ ಸಂಸ್ಕೃತಿ ಇವರ ಸರಳ ಜೀವನವೇ
ನಮಗೆ ಸ್ಫೂರ್ತಿದಾಯಕ.......

ಶುಭ್ರವಾದ ಬಿಳಿಯ ಉಡುಪು ಧರಿಸಿ
ಶುದ್ಧವಾದ ಸತ್ಯ ಸತ್ಯತೆಯ ಇವರ ನುಡಿಗಳೆ
ನಮ್ಮ ಬದುಕಿಗೆ ಪ್ರೇರಣದಾಯಕ......

ಹೆಸರಿಗೆ ತಕ್ಕಂತೆ ತಮ್ಮ ಜ್ಞಾನವನ್ನು
ಸಿದ್ಧಿಸಿಕೊಂಡು ಯೋಗಿಗಳಾಗಿ
"ಜ್ಞಾನಯೋಗಿ" ಎನಿಸಿಕೊಂಡವರು..... ಪೂಜ್ಯ
ಭಾವನೆಯಿಂದ ಕಂಡರೆ ಪೂಜ್ಯರು ಗುರು
ಭಾವನೆಯಿಂದ ಕಂಡರೆ ಗುರುಗಳು ಅವರೇ
ನಮ್ಮ ನಡೆದಾಡುವ ದೇವರು....

ಅರಿತರೆ ಶರಣ ಮರೆತರೆ ಮಾನವ
ಎನ್ನುವಂತೆ ತನ್ನ ತಾನು ಅರಿತು ಅರಿವೇ
ಗುರುವಾಗಿ ದೇವರ ಕೃಪೆಗೆ ಪಾತ್ರರಾಗಿ
ಶಿವೈಕ್ಯರಾದವರು.... ಬಸವಾದಿ ಶರಣ-
ರ ಪರಂಪರೆಯಲ್ಲಿ ಬದುಕಿ ಬಾಳಿದ ಶರಣ
ಸಂತರು, ವಿಜಯಪುರದ ಶ್ರೀ ಪೂಜ್ಯ
ಸಿದ್ದೇಶ್ವರರು......

-ಮಲ್ಲಿಕಾರ್ಜುನ ಸಿ ಉದ್ವಾಳ(ಯು)

ಗಾಣದಾಳ್-ಸೋಮನಮರಡಿ ಗ್ರಾಮ ಪಂಚಾಯಿತಿಗಳನ್ನು ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸಲು ನಾಳೆ ಬೃಹತ್ ಹೋರಾಟ

ಜಾಲಹಳ್ಳಿ ನಾಡ ಕಚೇರಿ ಮುಂದೆ ಪ್ರತಿಭಟನೆ; ಸ್ಪಂದಿಸದಿದ್ದರೆ ಮುಂಬರುವ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆ ಬಹಿಷ್ಕಾರದ ಎಚ್ಚರಿಕೆ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ,ಗಾಣದಾಳ್ ಹಾಗೂ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸುವಂತೆ ಆಗ್ರಹಿಸಿ ಅ.12ರಂದು (ನಾಳೆ) ಜಾಲಹಳ್ಳಿ ನಾಡ ಕಚೇರಿ ಮುಂದೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಗ್ರಾಮಗಳ ಮುಖಂಡರು ತಿಳಿಸಿದ್ದಾರೆ. ಜಾಲಹಳ್ಳಿಯಲ್ಲಿ ಅ.11ರಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಗಾಣದಾಳ್ ಹಾಗೂ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಖಂಡರು, ಎರಡೂ ಪಂಚಾಯಿತಿಗಳ ಗ್ರಾಮಸ್ಥರು ನಾಳೆ ಜಾಲಹಳ್ಳಿಯ ಶ್ರೀ ರಂಗನಾಥ ದೇವಸ್ಥಾನದಿಂದ ಮೆರವಣಿಗೆ ನಡೆಸಿ, ನಾಡ ಕಚೇರಿ ಮುಂದೆ ಪ್ರತಿಭಟನೆ ನಡೆಸಲಿದ್ದಾರೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ವಕೀಲ ಬಸವರಾಜ್ ಗಾಣದಾಳ್ ಅವರು, ಗಾಣದಾಳ್ ಹಾಗೂ ಸೋಮನಮರಡಿ



ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸಬೇಕು ಎಂಬುದು ಗ್ರಾಮಸ್ಥರ ಪ್ರಮುಖ ಬೇಡಿಕೆಯಾಗಿದೆ. ಸಾರ್ವಜನಿಕರು ಹಾಗೂ ರೈತರು ತಮ್ಮ ಜಮೀನಿನ ಪಹಣಿ, ಮ್ಯುಟೇಷನ್ ಸೇರಿದಂತೆ ಕಂದಾಯ ಇಲಾಖೆಯ ವಿವಿಧ ಕೆಲಸಗಳಿಗಾಗಿ ಸಮೀಪದ ಜಾಲಹಳ್ಳಿಯನ್ನು ಬಿಟ್ಟು ದೂರದ ಅರಕೇರಾಕ್ಕೆ ತೆರಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ರೈತರು ಹಾಗೂ ಸಾರ್ವಜನಿಕರು ಅನಗತ್ಯ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಹೇಳಿದರು.ಮಾತನಾಡಿದ ಮುಖಂಡ ಸಾಬಣ್ಣ ಕಮ್ಮಾಲದಿನ್ನಿ ಅವರು, ಗಾಣದಾಳ್ ಹಾಗೂ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ಜಾಲಹಳ್ಳಿ ಹೋಬಳಿಯಲ್ಲಿಯೇ ಮುಂದುವರಿಸಿ, ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸುವವರೆಗೆ ಹೋರಾಟ ಮುಂದುವರಿಸಲಾಗುವುದು ಎಂದು ಎಚ್ಚ-ರಿಸಿದರು.ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸರ್ಕಾರ ಗ್ರಾಮಸ್ಥರ ಬೇಡಿಕೆಗೆ ಸ್ಪಂದಿಸದಿದ್ದರೆ ಮುಂಬರುವ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಬಹಿಷ್ಕರಿಸಲಾಗುವುದು ಎಂದು ಅವರು ತಿಳಿಸಿದರು.ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದವರು ವಕೀಲ ಬಸವರಾಜ್ ಗಾಣದಾಳ್, ಅಮರೇಗೌಡ ಕಮ್ಮಾಲದಿನ್ನಿ, ಶಿವನಗೌಡ ದೇಸಾಯಿ, ಶರಣಗೌಡ ಕಮ್ಮಾಲದಿನ್ನಿ, ಸಾಬಣ್ಣ ಕಮ್ಮಾಲದಿನ್ನಿ, ವೆಂಕಟ-ರೆಡ್ಡಿ ಕಕ್ಕಲದೊಡ್ಡಿ, ಸಾಬಣ್ಣ ಹೂಗಾರ್, ಅಯ್ಯನ್ ಗೌಡ ಮಾಸ್ತಿ, ಶಿವು ಪಾಟೀಲ್, ವಕೀಲ ವಸಂತ್ ಕುಮಾರ್, ನಾಗರಾಜ್, ಅಬ್ರಹಾಂ ಕಮ್ಮಾಲದಿನ್ನಿ, ಹನುಮಂತ್ ಸೋಮನಮರಡಿ, ಎಂ.ಆರ್. ಬಸವ ಸೇರಿದಂತೆ ಗಾಣದಾಳ್ ಹಾಗೂ ಸೋಮನಮರಡಿ ಗ್ರಾಮಗಳ ಮುಖಂಡರು ಮತ್ತು ಗ್ರಾಮಸ್ಥರು ಹಾಜರಿದ್ದರು. ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

ಮತದಾನದ ಹಕ್ಕಿನ ರಕ್ಷಣೆಗೆ ಡಿವೈಎಫ್ಐ-ಎಸ್ಎಫ್ಐ ಬೃಹತ್ ಪಂಜಿನ ಮೆರವಣಿಗೆ

ಎಸ್ಐಆರ್ ಪ್ರಕ್ರಿಯೆ ರದ್ದತಿಗೆ ಆಗ್ರಹ; ಮುಖ್ಯ ಚುನಾವಣಾ ಆಯುಕ್ತರ ವಜಾಕ್ಕೆ ಒತ್ತಾಯಿಸಿ ಕೇಂದ್ರ ಸರ್ಕಾರದ ಧೋರಣೆ ಖಂಡಿಸಿ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ, ಮತದಾನದ ಹಕ್ಕನ್ನು ರಕ್ಷಿಸಬೇಕು, ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಹಾಗೂ ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಅವರನ್ನು ವಜಾಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ, ವಿದ್ಯಾರ್ಥಿ ಮತ್ತು ಯುವಜನರ ಹೋರಾಟವನ್ನು ಹತ್ತಿಕ್ಕುವ ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಿ ಶನಿವಾರ ಸಂಜೆ ಡಿವೈಎಫ್ಐ ಮತ್ತು ಎಸ್ಎಫ್ಐ ಸಂಘಟನೆಗಳ ನೇತೃತ್ವದಲ್ಲಿ ಜಾಲಹಳ್ಳಿಯಲ್ಲಿ ಬೃಹತ್ ಪಂಜಿನ ಮೆರವಣಿಗೆ ಹಾಗೂ ಪ್ರತಿಭಟನೆ ನಡೆಯಿತು.ಪಟ್ಟಣದ ಶ್ರೀ ಲಕ್ಷ್ಮೀ ರಂಗನಾಥ ದೇವಸ್ಥಾನದಿಂದ ಆರಂಭವಾದ ಪಂಜಿನ ಮೆರವಣಿಗೆ ಅಂಬೇಡ್ಕರ್ ವೃತ್ತದವರೆಗೆ ಸಾಗಿತು. ಈ ವೇಳೆ ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಿ, "ವೋಟ್ ಚೋರ್ ಗದ್ದಿ ಛೋಡ್", "ಗ್ಯಾನೇಶ್ ಕುಮಾರ್ ಅವರನ್ನು ವಜಾಗೊಳಿಸಿ" ಹಾಗೂ "ಎಸ್ಐಆರ್ ರದ್ದುಗೊಳಿಸಿ" ಎಂಬ ಘೋಷಣೆಗಳನ್ನು ಕೂಗಿದರು.ಪ್ರತಿಭಟನೆಯಲ್ಲಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ನರಸಣ್ಣ ನಾಯಕ, ಕಾಂಗ್ರೆಸ್ ಮುಖಂಡ ಹಾಗೂ ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ರಾಜಶೇಖರ



ನಾಯಕ, ಕಾಂಗ್ರೆಸ್ ರಾಜ್ಯ ಸಂಯೋಜ-ಕ ಹಾಗೂ ವಕೀಲ ವೇಣುಗೋಪಾಲ ಗೌಡ, ರಾಜ ವಾಸುದೇವ ನಾಯಕ, ಗಿರಿಯಪ್ಪ ಪೂಜಾರಿ, ಎಚ್.ಪಿ. ಬಸವರಾಜ, ಪಂಪಾಪತಿ ಹಾಗೂ ಶಬ್ಬೀರ್ ಅವರು ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಿ ಮಾತನಾಡಿದರು. ಮತದಾನವು ಪ್ರಜಾಪ್ರಭುತ್ವದ ಪ್ರಮುಖ ಹಕ್ಕಾಗಿದ್ದು, ಅರ್ಹ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡುವ ಯಾವುದೇ ಕ್ರಮವನ್ನು ಸಹಿಸಲು ಸಾಧ್ಯವಿಲ್ಲ ಎಂದು ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಮತದಾರರ ಪಟ್ಟಿ ಪರಿಷ್ಕರಣೆ ಪಾರದರ್ಶಕವಾಗಿ ಮತ್ತು ಕಾನೂನುಬದ್ಧವಾಗಿ ನಡೆಯಬೇಕು. ಯಾವುದೇ ಅರ್ಹ ಮತದಾರರು ತಮ್ಮ ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಚುನಾವಣಾ ಆಯೋಗ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಎಸ್ಐಆರ್ ಪ್ರಕ್ರಿಯೆಯಿಂದ ಸಾಮಾನ್ಯ ಜನರು, ಬಡವರು, ಕಾರ್ಮಿಕರು ಹಾಗೂ ಅಂಚಿನಲ್ಲಿರುವ ಸಮುದಾಯಗಳ ಮತದಾನದ ಹಕ್ಕಿಗೆ ಧಕ್ಕೆಯಾಗುವ ಆತಂಕವಿದೆ ಎಂದು ಅಭಿಪ್ರಾಯಪಟ್ಟ ಮುಖಂಡರು, ಮತದಾರರ ಪಟ್ಟಿಯಲ್ಲಿನ ಲೋಪದೋಷಗಳನ್ನು ಸರಿಪಡಿಸುವ ಹೆಸರಿನಲ್ಲಿ ಅರ್ಹ ಮತದಾರರ ಹೆಸರುಗಳನ್ನು ಕೈಬಿಡಬಾರದು. ಪ್ರತಿಯೊಬ್ಬ ಅರ್ಹ ನಾಗರಿಕನ ಮತದಾನದ ಹಕ್ಕನ್ನು ರಕ್ಷಿಸುವುದು ಚುನಾವಣಾ ಆಯೋಗದ ಜವಾಬ್ದಾರಿಯಾಗಿದೆ ಎಂದು ಹೇಳಿದರು.ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಮತಕ್ಕೆ ಮಹತ್ವವಿದೆ. ಮತದಾರರ ಹಕ್ಕುಗಳನ್ನು ರಕ್ಷಿಸುವ ಬದಲು ವಿದ್ಯಾರ್ಥಿ ಮತ್ತು ಯುವಜನರ ಹೋರಾಟಗಳನ್ನು ಹತ್ತಿಕ್ಕಲು ಮುಂದಾಗುವುದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿದೆ ಎಂದು ಟೀಕಿಸಿದರು. ಕೇಂದ್ರ ಸರ್ಕಾರವು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯಬೇಕು, ಎಸ್ಐಆರ್ ಪ್ರಕ್ರಿಯೆಯನ್ನು ಕೈಬಿಡಬೇಕು ಹಾಗೂ ಚುನಾವಣಾ ಆಯೋಗವು ಯಾವುದೇ ಒತ್ತಡಕ್ಕೆ ಒಳಗಾಗದೆ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕು ಎಂದು ಆಗ್ರಹಿಸಿದರು. ಮತದಾನದ ಹಕ್ಕಿನ ರಕ್ಷಣೆಗಾಗಿ ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳು ಹೋರಾಟವನ್ನು ಮುಂದುವರಿಸಲಿವೆ ಎಂದು ಮುಖಂಡರು ಎಚ್ಚ-ರಿಸಿದರು.ಡಿವೈಎಫ್ಐ ಮುಖಂಡ ರಾಜು ನಾಯಕ ಕಾರ್ಯಕ್ರಮ ನಿರೂಪಿಸಿದರು. ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರು, ವಕೀಲರು ಹಾಗೂ ಡಿವೈಎಫ್ಐ, ಎಸ್ಎಫ್ಐ ಮತ್ತು ಕೆಪಿಆರ್-ಎಸ್ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು. ಸೇ-ರಿದಂತೆ ಹಲವರು ಉಪಸ್ಥಿತರಿದ್ದರು.ವರದಿ :-ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

ಜಾಲಹಳ್ಳಿಯಲ್ಲಿ ಜೈ ಭೀಮ್ ಪ್ರೀಮಿಯರ್ ಲೀಗ್-2026 ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

ಪ್ರಥಮ ಬಹುಮಾನ 15 ಸಾವಿರ, ದ್ವಿತೀಯ 10 ಸಾವಿರ, ತೃತೀಯ 5 ಸಾವಿರ ನಗದು ಬಹುಮಾನ ಘೋಷಣೆ

❑ ನೈಜ್ಯ ದೆಸೆ ನ್ಯೂಸ್




ಜಾಲಹಳ್ಳಿ,ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಪಟ್ಟಣದಲ್ಲಿ ಜೈಭೀಮ್ ಪ್ರೀಮಿಯರ್ ಲೀಗ್-2026 ಕ್ರಿಕೆಟ್ ಪಂದ್ಯಾವಳಿಗೆ ಭಾನುವಾರ ಚಾಲನೆ ನೀಡಲಾಯಿತು. ಯುವಕರಲ್ಲಿ ಕ್ರೀಡಾಸಕ್ತಿ ಬೆಳೆಸುವುದು ಹಾಗೂ ಸ್ಥಳೀಯ ಕ್ರೀಡಾ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ.ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನವಾಗಿ -15,000, ದ್ವಿತೀಯ ಬಹುಮಾನವಾಗಿ -10,000 ಹಾಗೂ ತೃತೀಯ ಬಹುಮಾನವಾಗಿ -5,000 ನಗದು ಬಹುಮಾನ ಘೋಷಿಸಲಾಗಿದೆ. ಪ್ರಥಮ ಬಹುಮಾನವನ್ನು ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀಮತಿ ಶ್ರೀದೇವಿ ಆರ್. ನಾಯಕ್, ದ್ವಿತೀಯ ಬಹುಮಾನವನ್ನು ಭೂತಪ್ಪ ದೇವರಮನಿ ಹಾಗೂ ತೃತೀಯ ಬಹುಮಾನವನ್ನು ರಮೇಶ್ ಬಾವಿಮನಿ ಅವರು ಪ್ರಾಯೋಜಿಸಿದ್ದಾರೆ.ಈ ಸಂದರ್ಭದಲ್ಲಿ ಮಾತನಾಡಿದ ಪ್ರಥಮ ಬಹುಮಾನ ಪ್ರಾಯೋಜಕಿ ರಾಷ್ಟ್ರೀಯ ಮಹಿಳಾಕಾಂಗ್ರೆಸ್ ಕಾರ್ಯದರ್ಶಿ ಆಗಿರುವ ಶ್ರೀಮತಿ ಶ್ರೀದೇವಿ ಆರ್. ನಾಯಕ್ ಅವರು, ಯುವಕರಲ್ಲಿ ಕ್ರೀಡೆಯ ಬಗ್ಗೆ ಆಸಕ್ತಿ ಬೆಳೆಸುವುದು ಅತ್ಯಂತ ಅಗತ್ಯವಾಗಿದೆ. ಕ್ರೀಡೆಯು ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸುವುದರ ಜತೆಗೆ ಶಿಸ್ತು, ಆತ್ಮವಿಶ್ವಾಸ ಹಾಗೂ ಒಗ್ಗಟ್ಟಿನ ಮನೋಭಾವವನ್ನು ಬೆಳೆಸುತ್ತದೆ. ಯುವಕರು ತಮ್ಮ ಶಕ್ತಿಯನ್ನು ಸಕಾರಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂದು ಕರೆ ನೀಡಿದರು.ಭೂತಪ್ಪ ದೇವರಮನಿ ಹಾಗೂ ಭೀಮಣ್ಣ ವೀರಗೋಟ ಅವರು ಪಂದ್ಯಾವಳಿಗೆ ಶುಭ ಹಾರೈಸಿದರು.ಮುಖ್ಯ ಅತಿಥಿಗಳ ಉಪಸ್ಥಿತಿ:** ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಮಹಿಳಾಕಾಂಗ್ರೆಸ್ ಕಾರ್ಯದರ್ಶಿ ಆಗಿರುವ ಶ್ರೀಮತಿ ಶ್ರೀದೇವಿ ಆರ್. ನಾಯಕ್, ಜಾಲಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹನುಮಂತಿ ಶಿವಬಸಪ್ಪ ರಾಮ್ ಪಾಳಿ, ಶಿವರಾಜ್ ಪಾಣಿ ಸಾಹುಕಾರ್, ಜಾಲಹಳ್ಳಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಆರ್. ಎಸ್. ಹುಲಮನಿ ಗೌಡ, ಭೂತಪ್ಪ ದೇವರಮನಿ, ಭೀಮಣ್ಣ ವೀರಗೋಟ, ರಮೇಶ್ ಬಾವಿಮನಿ, ಚಂದಪ್ಪ ಬಾವಿಮನಿ, ಸುರೇಶ್ ಚಿಂತಲಕುಂಟಿ, ರಮೇಶ್ ಬಾಗೂರು, ಬಾಳಪ್ಪ, ಚನ್ನಪ್ಪ ಭವಾನಿ, ಪತ್ರಕರ್ತರು, ಭೀಮಣ್ಣ ಅಂಜಳ್, ಎಂ.ಆರ್. ಬಸವ, ತಿಮ್ಮಣ್ಣ ಹೊಸೂರು, ಮೌನೇಶ್ ಗಾಣದಾಳ್, ಲಿಂಗಣ್ಣ ಹವಾಲ್ದಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಕ್ರೀಡಾಪಟುಗಳು ಹಾಗೂ ಸ್ಥಳೀಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಕರ್ನಾಟಕ ವಿಧಾನ ಪರಿಷತ್ತಿನ ಚುನಾವಣೆ-2026 ಈಶಾನ್ಯ ಶಿಕ್ಷಕರ ಕ್ಷೇತ್ರಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ ಚುನಾವಣಾ ಆಯೋಗ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು:ಕರ್ನಾಟಕ ವಿಧಾನ ಪರಿಷತ್ತಿನ ಶಿಕ್ಷಕರ ಕ್ಷೇತ್ರಗಳಿಂದ ನಡೆಯಲಿರುವ ದ್ವೈವಾರ್ಷಿಕ ಚುನಾವಣೆ2026ಕ್ಕೆ ಸಂಬಂಧಿಸಿದಂತೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.ಭಾರತ ಚುನಾವಣಾ ಆಯೋಗದ ಅಧಿಸೂಚನೆಯಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಚುನಾವಣೆಗಳು) 2026ರ ಅಕ್ಟೋಬರ್ 9ರಂದು ಈ ಕುರಿತು ಅಧಿಸೂಚನೆ ಹೊರಡಿಸಿದೆ.1961ರ ಚುನಾವಣೆ ನಡೆಸುವ ನಿಯಮಗಳ ನಿಯಮ 11ರ ಉಪನಿಯಮ (2)ರ ಅನ್ವಯ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಪಟ್ಟಿಯನ್ನು ಪ್ರಕಟಿಸಲಾಗಿದೆ.

ಕ್ರ ಸಂ	ಅಭ್ಯರ್ಥಿಯ ಹೆಸರು	ಅಭ್ಯರ್ಥಿಯ ವಿಳಾಸ	ಪಕ್ಷದ ಹೆಸರು
1	2	3	4
I) ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು:			
1	ಶರಣಪ್ಪ ಮಟ್ಟೂರು 	ಪೋಸ್ಟ್‌|| ಮಟ್ಟೂರು ಗ್ರಾಮ|| ಮಟ್ಟೂರು ತಾ|| ಮಸ್ಕಿ ಜಿ|| ರಾಯಚೂರು-584125	ಇಂಡಿಯನ್ ನ್ಯಾಷನಲ್ ಕಾಂಗ್ರೆಸ್
2	ಶಶೀಲ್ ಜಿ. ನಮೋಶಿ 	ಮನೆನಂ. 10-2/35/1, ಆನಂದ ನಗರ, ಎಸ್.ಬಿ. ಕಾಲೇಜು ರಸ್ತೆ, ಕಲಬುರಗಿ-585103	ಭಾರತೀಯ ಜನತಾ ಪಾರ್ಟಿ
3	ಸೈಬಣ್ಣಾ ಜಮಾದಾರ 	ಸಾ|| ಹೆಬಳಿ ತಾ|| ಆಳಂದ ಜಿ|| ಕಲಬುರಗಿ-585302	ಆಮ್ ಆದ್ಮಿ ಪಾರ್ಟಿ
4	ಶಂಕರ ರೆಡ್ಡಿ ಪಾಟೀಲ 	ನಂ. 12, ಹೊಸ ಜೇವರ್ಗಿ ರಸ್ತೆ, ಸ್ನೇಹ ನಗರ, ಕಲಬುರಗಿ - 585102	ಜನತಾದಳ (ಯುನೈಟೆಡ್)
III) ಇತರ ಅಭ್ಯರ್ಥಿಗಳು			
5	ಡಾ|| ಕವಿರಾಜ ನಾಗಣ್ಣ ಮೋತಕಪಳ್ಳಿ 	ಪ್ಲಾಟ ನಂ. 86, ಗಣೇಶ ಮಂದಿರ ಹತ್ತಿರ, ಸದಾಶಿವ ನಗರ, ಹಳೆ ಜೇವರ್ಗಿ ರಸ್ತೆ, ಕಲಬುರಗಿ-585102.	ಪಕ್ಷೇತರ
6	ಟಿ.ಕೆ. ದಾಸರ 	ನಂ. 17, 7ನೇ ಅಡ್ಡ ರಸ್ತೆ, ಗುರುನಾನಕ ರಸ್ತೆ, ನೆಹರು ಕ್ರೀಡಾಂಗಣ ಹತ್ತಿರ, ಬೀದರ-585401	ಪಕ್ಷೇತರ
7	ಮಹಬೂಬ್ ಮಹ್ಮದ್ ಖಾಜಾಹುಸೇನ ವಂಟೆಳಿ 	ವಾರ್ಡ ನಂ. 15 ಹೊಸ ಬಸ್ ಸ್ಟ್ಯಾಂಡ್ ಹತ್ತಿರ, ಹನುಮಸಾಗರ-583281 ತಾ|| ಕುಷ್ಟಗಿ ಜಿ|| ಕೊಪ್ಪಳ	ಪಕ್ಷೇತರ
8	ರಾಜಕುಮಾರ.ಕೆ.ಕಲಬುರಗಿ 	ಜಿ.ಡಿ.ಎ, ಲಕ್ಷ್ಮೀನಗರ, ಸೇಡಂ ರಸ್ತೆ, ಕಲಬುರಗಿ-585106.	ಪಕ್ಷೇತರ
9	ರಾಜು ದೇವಪ್ಪ ಸೊನ್ನ 	ಪ್ಲಾಟ ನಂ. 19, ಚೌಡೇಶ್ವರ ಕಾಲೋನಿ, ಕಲಬುರಗಿ.	ಪಕ್ಷೇತರ
10	ಶರಣು.ಪಿ.ಸೂಗೂರ 	ಜಾಧವ್ ಲೇಔಟ, ಬಿದ್ದಾಪೂರ ಕಾಲೋನಿ, ಕಲಬುರಗಿ.	ಪಕ್ಷೇತರ
11	ಶಶಿಧರ ಬಸವರಾಜ 	ಗ್ರಾಮ: ನಾಗನಹಳ್ಳಿ, ಪೋಸ್ಟ್: ಪಿ.ಟಿ.ಸಿ, ತಾ|| ಕಲಬುರಗಿ, ಜಿ|| ಕಲಬುರಗಿ.	ಪಕ್ಷೇತರ
12	ಶಿವಶಂಕರ ಅಣ್ಣಪ್ಪ ತರನಳ್ಳಿ 	ಮನೆ ನಂ. 14-119, ವೀರಭದ್ರೇಶ್ವರ ರಸ್ತೆ, ಹುಮನಾಬಾದ, ಜಿ|| ಬೀದರ -585330	ಪಕ್ಷೇತರ

ನೇಮಕಾತಿ ಪ್ರಕಟಣೆ

KEA ನೇಮಕಾತಿ 2026 □ 247 ಪ್ರಾಂಶುಪಾಲರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ. ಏಇಂ ನೇಮಕಾತಿ 2026: 247 ಪ್ರಾಂಶುಪಾಲರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ನಿಗದಿತ ದಿನಾಂಕದೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಸಂಸ್ಥೆಯ ಹೆಸರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ಹುದ್ದೆಗಳ ಸಂಖ್ಯೆ: 247 ಉದ್ಯೋಗದ ಸ್ಥಳ: ಕರ್ನಾಟಕ ಹುದ್ದೆಯ ಹೆಸರು: ಪ್ರಾಂಶುಪಾಲರು ವೇತನ: ತಿಂಗಳಿಗೆ ರೂ. 90,200 □ 1,59,200/-.ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25-ಅಕ್ಟೋಬರ್-2026. ಅಧಿಕೃತ ವೆಬ್‌ಸೈಟ್: cetonline.karnataka.gov.in

ಅ.12ರಂದು ಸುಪ್ರೀಂ ಕೋರ್ಟ್ ಕಡೆ ರಾಹುಲ್ ಗಾಂಧಿ ನೇತೃತ್ವದ ನಡೆ: ಸಿಜೆಐ ಭೇಟಿಗೆ 'ಇಂಡಿಯಾ' ಒಕ್ಕೂಟ ನಿರ್ಧಾರ

ನೈಜ್ಯ ದೆಸೆ ನ್ಯೂಸ್



ನವದೆಹಲಿ:ಏಕಪಕ್ಷೀಯ ನಿರ್ಧಾರ ಕೈಗೊಂಡ ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿ ದೆಹಲಿಯಲ್ಲಿ ಇತ್ತೀಚೆಗೆ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳು ಮತ್ತು ಮಹಿಳೆಯರ ಮೇಲೆ ಪೊಲೀಸರು ದೌರ್ಜನ್ಯ ನಡೆಸಿರುವುದನ್ನು ಖಂಡಿಸಿ ಇಂಡಿಯಾ ಒಕ್ಕೂಟದ ನಾಯಕರು ಅಕ್ಟೋಬರ್ 12ರಂದು (ಸೋಮವಾರ) ಸುಪ್ರೀಂ ಕೋರ್ಟ್‌ಗೆ ಬೃಹತ್ ಮಾರ್ಚ್ ನಡೆಸಲಿದ್ದಾರೆ. ರಾಹುಲ್ ಗಾಂಧಿ ನೇತೃತ್ವದಲ್ಲಿ ಈ ಪಾದಯಾತ್ರೆ ನಡೆಯಲಿದೆ. ಮಾರ್ಚ್ ಬಳಿಕ ಸಿಜೆಐ ಭೇಟಿಯಾಗಿ ಮನವಿ ಪತ್ರ ಸಲ್ಲಿಸಿ, ಜವಾಬ್ದಾರಿ ನಿಗದಿಪಡಿಸುವಂತೆ ಆಗ್ರಹಿಸಲಿದ್ದಾರೆ.ಈ ಬಗ್ಗೆ ರಾಹುಲ್ ಗಾಂಧಿ ಮಾಹಿತಿ ನೀಡಿದ್ದು, ದೆಹಲಿಯಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ದೆಹಲಿ ಪೊಲೀಸರು ಮತ್ತು ಬಿಜೆಪಿ ಬೆಂಬಲಿಗರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿದ್ದಾರೆ. "ಹಿಂಸಾಚಾರ ಮತ್ತು ದೌರ್ಜನ್ಯದ ಮೂಲಕ ಪ್ರತಿಪಕ್ಷಗಳನ್ನು ಹಾಗೂ ಯುವಜನರ ಧ್ವನಿಯನ್ನು ಅಡಗಿಸಲು ಸಾಧ್ಯವಿಲ್ಲ" ಎಂದುಈ ಸಂದರ್ಭದಲ್ಲೇ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಅಕ್ರಮಗಳನ್ನು ನಡೆಸಲಾಗಿದೆ, ಮತಗಳವು ಮಾಡಲಾಗಿದೆ ಎಂದು ಆರೋಪಿಸಿರುವ ರಾಹುಲ್ ಗಾಂಧಿ, ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿದ್ದಾರೆ.ಅಕ್ಟೋಬರ್ 12ರಂದು 'ಇಂಡಿಯಾ' ಒಕ್ಕೂಟದ ವಿವಿಧ ನಾಯಕರು, ವಿರೋಧ ಪಕ್ಷಗಳು, ನಾಗರಿಕ ಸಮಾಜದ ಸಂಘಟನೆಗಳು ಮತ್ತು ಯುವಜನರು ಬೀದಿಗಿಳಿದು ಸುಪ್ರೀಂ ಕೋರ್ಟ್ ಕಡೆಗೆ ಮೆರವಣಿಗೆ ಸಾಗಲಿದ್ದಾರೆ. ಈ ಸಂದರ್ಭದಲ್ಲಿ ಸಿಜೆಐ ಅವರನ್ನು ಭೇಟಿಯಾಗಿ ದೇಶದ ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕ ಮೌಲ್ಯಗಳ ರಕ್ಷಣೆಗೆ ಸಂಬಂಧಿಸಿದಂತೆ ಮನವಿ ಸಲ್ಲಿಸಲಾಗುತ್ತದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ತ್ರಿಂಬಕೇಶ್ವರ ದೇವಸ್ಥಾನದ ಗ್ರಾಮ ಠಾಣಾ ಜಾಗದಲ್ಲಿ ಅಕ್ರಮವಾಗಿ 40ಕ್ಕೂ ಹೆಚ್ಚು ಮಂದಿಗೆ ಹಕ್ಕುಪತ್ರ ವಿತರಣೆ

ನೈಜ್ಯ ದೆಸೆ ನ್ಯೂಸ್



ಕವಿತಾಳ: ಪಟ್ಟಣದ ಪ್ರಸಿದ್ಧ ತ್ರಿಂಬಕೇಶ್ವರ ದೇವಸ್ಥಾನಕ್ಕೆ ಸೇರಿದ ಗ್ರಾಮ ಠಾಣಾ ಜಾಗದಲ್ಲಿ ಸ್ಥಳೀಯ ಶಾಸಕರ ಗಮನಕ್ಕೆ ತರದೆ ಮತ್ತು ಅವರ ಅನುಮತಿ ಪಡೆಯದೆ ಅಧಿಕಾರಿಗಳು ಅಕ್ರಮವಾಗಿ 40ಕ್ಕೂ ಹೆಚ್ಚು ಮಂದಿಗೆ ಹಕ್ಕುಪತ್ರಗಳನ್ನು ವಿತರಿಸಿದ್ದಾರೆ ಎಂದು ದೇವಸ್ಥಾನ ಸಮಿತಿಯ ಸದಸ್ಯರು ಮತ್ತು ಪಟ್ಟಣದ ಮುಕಂಡರು ಆರೋಪಿಸಿದ್ದಾರೆ. ಅವರು ಇಂದು ದೇವಸ್ಥಾನ ಸಮಿತಿಯ ಅಧ್ಯಕ್ಷ ಗಂಗಪ್ಪ ದಿನ್ನಿ ಮತ್ತು ದಲಿತ ಮುಖಂಡ ಅಲ್ಲಮಪ್ರಭು ಕಲ್‌ಶೆಟ್ಟಿ ಸೇರಿದಂತೆ ಪಟ್ಟಣದ ಪ್ರಮುಖರು ಪತ್ರಿಕಾಗೋಷ್ಠಿಯನ್ನು ಹಮ್ಮಿಕೊಂಡು ಮಾತನಾಡಿದರು.2014ರಲ್ಲಿ ಗ್ರಾಮ ಪಂಚಾಯತಿ ಆಡಳಿತ ಮಂಡಳಿಯು ಸಭೆ ನಡೆಸಿ ಸಾರ್ವಜನಿಕ ಹಾಗೂ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಿಗಾಗಿ ಈ ಜಾಗವನ್ನು ಅಧಿಕೃತವಾಗಿ ಮೀಸಲಿಟ್ಟಿದ್ದು ವಿವಿಧ ಸಂಘಟನೆಗಳ ಮುಖಾಂತರ ಹಲವಾರು ಸಾರಿ ಆಕ್ಷೇಪಣೆಗಳನ್ನು ನೀಡಿದ್ದರ ನಡುವೆಯೂ ಹಕ್ಕುಪತ್ರಗಳನ್ನು ಹಂಚಿಕೆ ಮಾಡಿರುವುದರ ವಿರುದ್ಧ ದೇವಸ್ಥಾನದ ಕಮಿಟಿಯ ಪ್ರಮುಖರು ಹಾಗೂ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಆದರೆ ಈ ಗ್ರಾಮ ಠಾಣಾ ಜಾಗವನ್ನು ಪಟ್ಟಣ ಪಂಚಾಯಿತಿ ಅಧಿಕಾರಿಗಳು ಕೊಳಗೇರಿ ಅಭಿವೃದ್ಧಿ ನಿಗಮ ರಾಯಚೂರು ಎಂದು ತೋರಿಸಿರುವುದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು ಮತ್ತು ಈಗಾಗಲೇ ನಿಜವಾದ ನಿರ್ಗತಿಕರಿಗಾಗಿ ಎನ್. ಎಸ್, ಬೋಸರಾಜು ಕಾಲೋನಿಯಲ್ಲಿ ಜಾಗ ನೀಡಲಾಗಿದ್ದರೂ, ಇಲ್ಲಿ ಅಕ್ರಮವಾಗಿ ಬೇರೆ ವ್ಯಕ್ತಿಗಳು ವಾಸವಾಗಿದ್ದು ಫಲಾನುಭವಿಗಳಿಗೆ ಅನ್ಯಾಯವಾಗುತ್ತಿದೆ ಎಂದು ದೂರಿದರು. ಕಳೆದ ಕೆಲವು ವರ್ಷಗಳಿಂದ ದೇವಸ್ಥಾನದ ಜಾಗವನ್ನು ಕಬಳಿಸುವ ಯತ್ನ ನಡೆಯುತ್ತಿದ್ದು, ಕೊಳಗೇರಿ ಅಭಿವೃದ್ಧಿ ನಿಗಮದ ಅಧಿಕಾರಿಗಳು ಹಾಗೂ ಸ್ಲಮ್ ಬೋರ್ಡ್ ಅಧಿಕಾರಿಗಳು ಯಾವುದೇ ನಿಯಮಗಳನ್ನು ಪಾಲಿಸದೆ ಅವೈಜ್ಞಾನಿಕವಾಗಿ ಏಕಾಏಕಿ ಹಕ್ಕುಪತ್ರಗಳನ್ನು ಹಂಚಿಕೆ ಮಾಡಿದ್ದಾರೆ ಎಂದು ಕಿಡಿಕಾರಿದರು.ಸ್ಲಮ್ ಬೋರ್ಡ್ ಅಧಿಕಾರಿಗಳು ಕೇವಲ ಕಾಗದದಲ್ಲಿ 8 ಎಕರೆ 8 ಗುಂಟೆ ಜಾಗವನ್ನು ನೀಡಿರುವುದಾಗಿ ಬರೆದುಕೊಟ್ಟಿದ್ದಾರೆ ಹೊರತು, ವಾಸ್ತವದಲ್ಲಿ ಸ್ಥಳದಲ್ಲಿ ಯಾವುದೇ ಸರ್ವೇ ನಡೆಸಿಲ್ಲ. ಬಡವರಿಗೆ ಜಾಗ ಕೊಡುವುದರಲ್ಲಿ ನಮ್ಮ ಯಾವುದೇ ವಿರೋಧವಿಲ್ಲ, ಆದರೆ ದೇವಸ್ಥಾನದ ಅಭಿವೃದ್ಧಿಗೆ ಮತ್ತು ಸಾರ್ವಜನಿಕ ಸೌಲಭ್ಯಗಳಿಗೆ ಮೀಸಲಿರುವ ಜಾಗವನ್ನು ಅಕ್ರಮವಾಗಿ ಕಬಳಿಸಿ, ಅಧಿಕಾರಿಗಳು ತಮ್ಮಿಷ್ಟ ಬಂದವರಿಗೆ ಹಂಚಿಕೆ ಮಾಡುತ್ತಿರುವುದು ಯಾವ ನ್ಯಾಯ ಎಂದು ಪ್ರಶ್ನಿಸಿದರು ಜಾಗದ ಕುರಿತು ತಡೆ ಕೋರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ, ಆಕ್ಷೇಪಣೆಗಳನ್ನು ಲೆಕ್ಕಿಸದೆ ದೇವಸ್ಥಾನ ಕಮೀಟಿಗೆ ತಿಳಿಸದೆ 40ಕ್ಕೂ ಹೆಚ್ಚು ಜನರಿಗೆ ಹಕ್ಕುಪತ್ರಗಳನ್ನು ನೀಡಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿಗಳು ಸೇರಿದಂತೆ ಸಿರವಾರ ತಾಲ್ಲೂಕ ದಂಡಾಧಿಕಾರಿಗಳಿಗೂ ಮತ್ತು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಸ್ಪಷ್ಟ ಪರಿಹಾರ ಸಿಗದ ಹಿನ್ನೆಲೆಯಲ್ಲಿ, ಉನ್ನತಾಧಿಕಾರಿಗಳು ಕೂಡಲೇ ಎಚ್ಚೆತ್ತುಕೊಂಡು ಜಾಗದ ದಾಖಲೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತ್ರಯಂಬಕೇಶ್ವರ ದೇವಸ್ಥಾನ ಸಮಿತಿಯ ಸದಸ್ಯರು ಮತ್ತು ಊರಿನ ಪ್ರಮುಖರು ಒತ್ತಾಯಿಸಿದ್ದಾರೆ. ಒಂದು ಒಳ್ಳೆ ನಿರ್ಲಕ್ಷ್ಯ ವಹಿಸಿದರೆ ಮುಂದಿನ ದಿನಮಾನಗಳಲ್ಲಿ ಉಗ್ರವಾದ ಹೋರಾಟ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.ಈ ಸಂದರ್ಭದಲ್ಲಿ ದೇವಸ್ಥಾನದ ಅರ್ಚಕ ಸಿದ್ದಯ್ಯಸ್ವಾಮಿ, ಈಶ್ವರಪ್ಪ ಕಾಮರಡ್ಡಿ ಸಾಹುಕಾರ, ರಮೇಶ ಮೀಶ್ರ, ತಿಪ್ಪಯ್ಯಸ್ವಾಮಿ,ಪಟ್ಟಣ ಪಂಚಾಯತಿ ಸದಸ್ಯ ಮಲ್ಲಿಕಾರ್ಜುನ ಗೌಡ, ಈರಣ್ಣ ಕೆಳಗೇರಿ, ವೆಂಕಟೇಶ ಅರಕೇರಿ, ಓವಣ್ಣ ಕಡತಲ್, ಹನುಮಂತ ಅರಕೇರಿ, ಸಿದ್ದಪ್ಪ ಬುಳ್ಳಾಪೂರ, ಆನಂದ, ಮೌನೇಶ ಕಟ್ಟಿಮನಿ, ಅಮರೇಶ, ಅಮರೇಶ ಭೋವಿ ಹಾಗೂ ತಾಯಪ್ಪ ಯಾದವ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು. ಆಕ್ಷೇಪಣೆಗಳ ನಡುವೆಯೂ ಹಕ್ಕುಪತ್ರಗಳನ್ನು ಹಂಚಿಕೆ ಮಾಡಿರುವುದರ ವಿರುದ್ಧ ದೇವಸ್ಥಾನದ ಕಮಿಟಿಯ ಪ್ರಮುಖರು ಹಾಗೂ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಜಂಟಿ ಸಂಘಟನೆಯಿಂದ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು :ಹಟ್ಟಿ ಚಿನ್ನದ ಗಣಿ, ತಾಲ್ಲೂಕಿನ ವೀರಾಪುರ ಗ್ರಾಮದಲ್ಲಿ ಜಂಟಿ ಸಂಘಟನೆಗಳ ನೇತೃತ್ವದಲ್ಲಿ ಪ್ರಕ್ರಿಯೆ ರದ್ದುಪಡಿಸಬೇಕು ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು. CITU, CWFI, KPRಸಂಘಟನೆಗಳ ಮುಖಂಡರು, ಕೃಷಿ ಕೂಲಿಕಾರರು ಮತ್ತು ಗ್ರಾಮಸ್ಥರು ಪ್ರತಿಭಟನೆಯಲ್ಲಿ ಭಾಗವಹಿಸಿ ಚುನಾವಣಾ ಆಯೋಗದ ವಿರುದ್ಧ ಘೋಷಣೆಗಳನ್ನು ಕೂಗಿದರು. ಈ ವೇಳೆ ಮಾತನಾಡಿದ ಇಐಖಿಖಿ ಮುಖಂಡ ಕಾಂ. ನಿಂಗಪ್ಪ ಎಂ. ವೀರಾಪುರ ಅವರು, ದೇಶದ ಪ್ರತಿಯೊಬ್ಬ ಅರ್ಹ ನಾಗರಿಕನಿಗೂ ಮತದಾನದ ಹಕ್ಕು ಅತ್ಯಂತ ಮಹತ್ವದ್ದಾಗಿದೆ. ಆದರೆ, ಗ್ರಾಮೀಣ ಪ್ರದೇಶದ ಅನೇಕ ನಾಗರಿಕರಿಗೆ ಖಬ್ಬ ಪ್ರಕ್ರಿಯೆಯ ಕುರಿತು ಸಂಪೂರ್ಣ ಮಾಹಿತಿ ಇಲ್ಲದಿರುವುದು ಆತಂಕಕಾರಿ ಸಂಗತಿಯಾಗಿದೆ. ಅರ್ಹ ಮತದಾರರ ಹಕ್ಕುಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು ಚುನಾವಣಾ ಆಯೋಗದ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಚುನಾವಣಾ ಆಯೋಗವು ಯಾವುದೇ ರಾಜಕೀಯ ಪಕ್ಷದ ಪರವಾಗಿ ಕಾರ್ಯನಿರ್ವಹಿಸದೆ, ಪಕ್ಷಾತೀತವಾಗಿ ಹಾಗೂ ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕು. ಪ್ರತಿಯೊಬ್ಬ ಅರ್ಹ ಮತದಾರನ ಹೆಸರನ್ನು ಮತದಾರರ ಪಟ್ಟಿಯಲ್ಲಿ ಉಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಪ್ರಕ್ರಿಯೆಯನ್ನು ತಕ್ಷಣ ರದ್ದುಪಡಿಸಬೇಕು ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಅಲ್ಪಸಂಖ್ಯಾತರು, ಆದಿವಾಸಿಗಳು, ಹಿಂದುಳಿದ ವರ್ಗಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಸೇರಿದಂತೆ ಸಮಾಜದ ಎಲ್ಲ ಅರ್ಹ ನಾಗರಿಕರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಇರುವಂತೆ ಆಯೋಗ ಖಚಿತ ಪಡಿಸಿಕೊಳ್ಳಬೇಕು. ಯಾವುದೇ ಅರ್ಹ ಮತದಾರರು ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಇದಲ್ಲದೆ, ಕೆಲವು ಬಿಜೆಪಿ ಹಾಗೂ ಸಂಘಪರಿವಾರದ ಕಾರ್ಯಕರ್ತರು ಸುಮಾರು 10 ಸಾವಿರದಿಂದ 20 ಸಾವಿರ ಮತದಾರರಿಗೆ ಫಾರ್ಮ್ ನಂ. 7 ನೀಡಿ, ಅವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಅಳಿಸಲು ಪ್ರಯತ್ನಿಸಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಈ ಆರೋಪದ ಕುರಿತು ಚುನಾವಣಾ ಆಯೋಗ ಸಮಗ್ರ ತನಿಖೆ ನಡೆಸಬೇಕು ಹಾಗೂ ಅಕ್ರಮ ನಡೆದಿರುವುದು ದೃಢಪಟ್ಟಲ್ಲಿ ಸಂಬಂಧಪಟ್ಟವರ ವಿರುದ್ದ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರಜಾಪ್ರಭುತ್ವದ ಬಲವರ್ಧನೆಗೆ ಪ್ರತಿಯೊಬ್ಬ ಅರ್ಹ ನಾಗರಿಕನ ಮತವೂ ಅಮೂಲ್ಯವಾಗಿದೆ. ಮತದಾರರ ಹಕ್ಕುಗಳನ್ನು ರಕ್ಷಿಸುವುದು, ಮತದಾರರ ಪಟ್ಟಿಯಲ್ಲಿ ಪಾರದರ್ಶಕತೆ ಕಾಪಾಡುವುದು ಹಾಗೂ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳುವುದು ಚುನಾವಣಾ ಆಯೋಗದ ಕರ್ತವ್ಯವಾಗಿದೆ ಎಂದು ಪ್ರತಿಭಟನಾಕಾರರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಇಐಖಿಖಿ ಮುಖಂಡರಾದ ನಿಂಗಪ್ಪ ಎಂ. ವೀರಾಪುರ, ಪಕ್ರುದ್ದಿನ್ ಮುಲ್ಲಾ, ಅಲ್ಲಾಭಕ್ಷಾ ದೇವಾಪುರ, ರಫೀ ಕಸಬಾ ಲಿಂಗಸಗೂರು, ಮುಖಂಡರಾದ ಪಂಚಲಯ್ಯ ಹಟ್ಟಿ, ಮಹಾಂತೇಶ, ವನಜಾಕ್ಷಿ ಸೇರಿದಂತೆ ಜಂಟಿ ಸಂಘಟನೆಗಳ ಮುಖಂಡರು, ಕೃಷಿ ಕೂಲಿಕಾರರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಸಿಂಧನೂರಿನ ಕಾರುಣ್ಯ ಆಶ್ರಮದ ಅಮರಯ್ಯ ಸ್ವಾಮಿಗೆ ಈ ಬಾರಿಯಾದರೂ ರಾಜ್ಯೋತ್ಸವ ಪ್ರಶಸ್ತಿ ಸಿಗಬಹುದೇ..?

ದಶಕಗಳಿಂದ ಅನಾಥರು, ಬುದ್ಧಿಮಾಂದ್ಯರು ಹಾಗೂ ಹಿರಿಯ ನಾಗರಿಕರ ಸೇವೆ: ಸರ್ಕಾರದ ಗಮನ ಸೆಳೆದ ನಿಸ್ವಾರ್ಥ ಕಾಯಕಕ್ಕೆ ಮನ್ನಣೆ ಯಾವಾಗ?

ನೈಜ್ಯ ದೆಸೆ ನ್ಯೂಸ್





ಸಿಂಧನೂರು: ಸಮಾಜದಲ್ಲಿ ಅನೇಕರಿಗೆ ಬದುಕಿನ ಆಸರೆಯಾಗಿ, ಅನಾಥರ ಬಾಳಿಗೆ ಬೆಳಕಾಗಿ, ನಿರ್ಗತಿಕರ ಹಸಿವಿಗೆ ಅನ್ನವಾಗಿ, ಹಿರಿಯ ನಾಗರಿಕರು ಹಾಗೂ ಬುದ್ಧಿಮಾಂದ್ಯರ ಪಾಲಿಗೆ ಆಶ್ರಯದಾತರಾಗಿ ಸೇವೆ ಸಲ್ಲಿಸುತ್ತಿರುವ ಸಿಂಧನೂರಿನ ಕಾರುಣ್ಯ ಆಶ್ರಮದ ಸಂಸ್ಥಾಪಕರಾದ ವೇದಮೂರ್ತಿ ಅಮರಯ್ಯ ಸ್ವಾಮಿಯವರಿಗೆ ಈ ಬಾರಿಯಾದರೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸುತ್ತದೆಯೇ ಎಂಬ ನಿರೀಕ್ಷೆ ಸಾರ್ವಜನಿಕ ವಲಯದಲ್ಲಿ ಮೂಡಿದೆ. ಕಲ್ಯಾಣ ಕರ್ನಾಟಕ ಭಾಗವಷ್ಟೇ ಅಲ್ಲದೆ, ರಾಜ್ಯದ ವಿವಿಧೆಡೆ ಮಾನವೀಯ ಸೇವೆಯ ಮೂಲಕ ಗುರುತಿಸಿಕೊಂಡಿರುವ ಅಮರಯ್ಯ ಸ್ವಾಮಿಯವರ ಕಾರ್ಯಕ್ಕೆ ರಾಜ್ಯಮಟ್ಟದ ಗೌರವ ದೊರೆಯಬೇಕೆಂಬ ಒತ್ತಾಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.ದೇವಿಗೆ ಸಲ್ಲುವ ಕಾಣಿಕೆಯಲ್ಲಿ ಅನಾಥರ ಹಸಿವಿಗೆ ಆದ್ಯತೆ!ಸಿಂಧನೂರು ತಾಲೂಕಿನ ಹರಟನೂರು ಗ್ರಾಮದ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿಯ ಅರ್ಚಕರಾಗಿರುವ ವೇದಮೂರ್ತಿ ಅಮರಯ್ಯ ಸ್ವಾಮಿಯವರು, ದೇವಿಗೆ ಭಕ್ತರು ಅರ್ಪಿಸುವ ಮಂಗಳಾರತಿ ಕಾಣಿಕೆ ಹಾಗೂ ದವಸಧಾನ್ಯಗಳನ್ನು ಅನಾಥರು ಮತ್ತು ಆಶ್ರಮವಾಸಿಗಳ ಹಸಿವು ನೀಗಿಸಲು ಬಳಸುತ್ತಿರುವುದು ಅವರ ಸೇವಾ ಮನೋಭಾವಕ್ಕೆ ಸಾಕ್ಷಿಯಾಗಿದೆ.ಸರ್ಕಾರದ ಯಾವುದೇ ಅನುದಾನದ ನಿರೀಕ್ಷೆಯಿಲ್ಲದೆ, ದಾನಿಗಳ ಸಹಾಯ-ಸಹಕಾರದೊಂದಿಗೆ ಹಾಗೂ 'ಜಂಗಮ ಜೋಳಿಗೆ' ಕಾಯಕದ ಮೂಲಕ ಕಾರುಣ್ಯ ಆಶ್ರಮವನ್ನು ಮುನ್ನಡೆಸುತ್ತಿರುವುದು ವಿಶೇಷವಾಗಿದೆ. ಸಮಾಜದ ನಿರ್ಗತಿಕರು, ಅನಾಥರು, ಬುದ್ಧಿಮಾಂದ್ಯರು ಮತ್ತು ಹಿರಿಯ ನಾಗರಿಕರಿಗೆ ಆಸರೆಯಾಗಿರುವಆಶ್ರಮವು ಮಾನವೀಯ ಸೇವೆಯ ಕೇಂದ್ರವಾಗಿ ರೂಪುಗೊಂಡಿದೆ.ಹಿರಿಯ ನಾಗರಿಕರ ಸೇವೆಗೆ ರಾಜ್ಯಮಟ್ಟದ ಮನ್ನಣೆ ಕಾರುಣ್ಯ ಆಶ್ರಮದ ಸೇವೆಯನ್ನು ಗುರುತಿಸಿ, 2023ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಹಿರಿಯ ನಾಗರಿಕರ ಸೇವಾ ಕ್ಷೇತ್ರದಲ್ಲಿ ರಾಜ್ಯಮಟ್ಟದ ಗೌರವ ದೊರೆತಿರುವುದು ಆಶ್ರಮದ ಸೇವಾ ಪಯಣದ ಮಹತ್ವದ ಮೈಲಿಗಲ್ಲಾಗಿದೆ.ಆದರೆ, ದಶಕಗಳಿಂದ ನಿರಂತರವಾಗಿ ಮಾನವೀಯ ಸೇವೆಯಲ್ಲಿ ತೊಡಗಿರುವ ಆಶ್ರಮದ ಸಂಸ್ಥಾಪಕರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಬೇಕು ಎಂಬುದು ಸ್ಥಳೀಯರ ಆಶಯವಾಗಿದೆ.*ಇಬ್ಬರು ಶಾಸಕರ ಪ್ರಯತ್ನಕ್ಕೆ ಈ ಬಾರಿ ಫಲ ಸಿಗುವುದೇ?ಕಳೆದ ವರ್ಷ ಸಿಂಧನೂರಿನ ಇಬ್ಬರು ಶಾಸಕರು ಕಾರುಣ್ಯ ಆಶ್ರಮಕ್ಕೆ ರಾಜ್ಯೋತ್ಸವ ಪ್ರಶಸ್ತಿ ದೊರಕಿಸಿಕೊಡಲು ಪ್ರಯತ್ನಿಸಿದ್ದರು ಎನ್ನಲಾಗಿದೆ. ಈ ಬಾರಿಯೂ ಜನಪ್ರತಿನಿಧಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಹಾಗೂ ಸರ್ಕಾರದ ಗಮನಕ್ಕೆ ಅಮರಯ್ಯ ಸ್ವಾಮಿಯವರ ಸೇವೆಯನ್ನು ತಂದು, ಪ್ರಶಸ್ತಿ ದೊರಕಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂಬ ಆಗ್ರಹ ಕೇಳಿಬರುತ್ತಿದೆ.ನಾಡಿನ ನಡೆದಾಡುವ ದೇವರೆಂದೇ ಭಕ್ತರಿಂದ ಗೌರವಿಸಲ್ಪಡುವ ಶ್ರೀ ಮರಿಯಪ್ಪಜ್ಜನವರ ಪರಂಪರೆಯ ಮಠಾಧೀಶರು, ಮೈಸೂರು ದಸರಾ ಉದ್ಘಾಟನೆ ನೆರವೇರಿಸಿದ ಶ್ರೀಗಳೂ ಸೇರಿದಂತೆ ವಿವಿಧ ಮಠಾಧೀಶರು, ರಾಜಕೀಯ ಮುಖಂಡರು ಹಾಗೂ ಜನಪ್ರತಿನಿಧಿಗಳು ಕಾರುಣ್ಯ ಆಶ್ರಮದ ಸೇವೆಯನ್ನು ಗುರುತಿಸಿರುವುದಾಗಿ ಸ್ಥಳೀಯರು ಉಲ್ಲೇಖಿಸುತ್ತಾರೆ.*ಅಮರಯ್ಯ ಸ್ವಾಮಿಯವರ ಸೇವೆಗೆ ರಾಜ್ಯೋತ್ಸವ ಪ್ರಶಸ್ತಿ ದೊರೆತರೆ ಅದೇ ನಾಡಿಗೆ ಹೆಮ್ಮೆಪ್ರಶಸ್ತಿ ಎನ್ನುವುದು ಕೇವಲ ಒಬ್ಬ ವ್ಯಕ್ತಿಗೆ ನೀಡುವ ಗೌರವವಲ್ಲ; ಸಮಾಜದ ಅಸಹಾಯಕರಿಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟ ಸೇವಾ ಮನೋಭಾವಕ್ಕೆ ನೀಡುವ ಮಾನ್ಯತೆಯಾಗಿದೆ.ಆದ್ದರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ ತಂಗಡಗಿ ಅವರು ಹಾಗೂ ರಾಜ್ಯ ಸರ್ಕಾರವು ಕಾರುಣ್ಯ ಆಶ್ರಮದ ಸಂಸ್ಥಾಪಕರಾದ ವೇದಮೂರ್ತಿ ಅಮರಯ್ಯ ಸ್ವಾಮಿಯವರ ದಶಕಗಳ ಸೇವೆಯನ್ನು ಪರಿಗಣಿಸಿ, ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡುವ ಕುರಿತು ಸೂಕ್ತವಾಗಿ ಪರಿಶೀಲಿಸಬೇಕು ಎಂಬುದು ಸಿಂಧನೂರಿನ ಕನ್ನಡಪರ ಸಂಘಟನೆಗಳು, ದಲಿತ ಸಂಘಟನೆಗಳು ಹಾಗೂ ವಿವಿಧ ಸಮಾಜಗಳ ಮುಖಂಡರುಗಳು ಒತ್ತಾಯವಾಗಿದೆ.ಅನಾಥರ ಕಣ್ಣೀರೊರೆಸಿದ ಕೈಗಳಿಗೆ ಗೌರವ ಸಿಗಲಿ, ಹಸಿದವರ ಹೊಟ್ಟೆ ತುಂಬಿಸಿದ ಸೇವೆಗೆ ರಾಜ್ಯದ ಮಾನ್ಯತೆ ದೊರೆಯಲಿ, ನಿಸ್ವಾರ್ಥ ಮಾನವೀಯ ಕಾಯಕಕ್ಕೆ ರಾಜ್ಯೋತ್ಸವ ಪ್ರಶಸ್ತಿಯ ಗರಿ ಮೂಡಲಿ ಎಂಬುದು ಸಿಂಧನೂರಿನ ಜನತೆಯ ಆಶಯವಾಗಿದೆ.ಈ ಬಾರಿಯಾದರೂ ಕಾರುಣ್ಯ ಆಶ್ರಮದ ಅಮರಯ್ಯ ಸ್ವಾಮಿಯವರ ಸೇವೆಯನ್ನು ರಾಜ್ಯ ಸರ್ಕಾರ ಗುರುತಿಸಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡುತ್ತದೆಯೇ ಎಂಬುದನ್ನು ಕಾದುನೋಡಬೇಕಿದೆ.

ವಚನ ದರ್ಶನ

ಎನ್ನ ಕಾಯವ ದಂಡಿಗೆಯ ಮಾಡಯ್ಯಾ ಎನ್ನ ಶಿರವ ಸೋರೆಯ ಮಾಡಯ್ಯಾ ಎನ್ನ ನರವ ತಂತಿಯ ಮಾಡಯ್ಯಾ, ಎನ್ನ ಬೆರಳ ಕಡ್ಡಿಯ ಮಾಡಯ್ಯಾ ಬತ್ತೀಸ ರಾಗವ ಹಾಡಯ್ಯಾ, ಉರದಲೊತ್ತಿ ಬಾರಿಸು,ಕೂಡಲಸಂಗಮದೇವಾ

12 ನೇ ಶತಮಾನದ ಶರಣರಾದ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ಹಾಗೂ ಸುಂದರವಾದ ವಚನವಾಗಿದೆ. ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ತಮ್ಮ ಸಂಪೂರ್ಣ ದೇಹವನ್ನು ದೇವರ ಸೇವೆಗೆ ಅರ್ಪಿಸಿಕೊಳ್ಳುವಂತೆ ಮತ್ತು ದೇವನೇ ಅದನ್ನು ನುಡಿಸುವಂತೆ ಬೇಡಿಕೊಂಡಿದ್ದಾರೆ.ಈ ವಚನದಲ್ಲಿ ಬಸವಣ್ಣನವರು ತಮ್ಮನ್ನು ತಾವು ದೇವರ ಕೈಯಲ್ಲಿರುವ 'ದಂಡಿಗೆ' ಇಂದಿನ ವೀಣೆಯಂತಹ ಒಂದು ತಂತಿ ವಾದ್ಯ ಮಾಡಲು ಕೇಳಿಕೊಳ್ಳುತ್ತಿದ್ದಾರೆ.ದೇಹ ಮತ್ತು ಶಿರ ನನ್ನ ದೇಹವನ್ನು ವಾದ್ಯದ ದಂಡವನ್ನಾಗಿಯೂ, ನನ್ನ ತಲೆಯನ್ನು ವಾದ್ಯಕ್ಕೆ ಬಳಸುವ ಒಣ-ಗಿದ ಸೋರೆಕಾಯಿಯ ಬುರುಡೆಯನ್ನಾಗಿಯೂ ಮಾಡು.ನರ ಮತ್ತು ಬೆರಳು: ನನ್ನ ದೇಹದ ನರಗಳನ್ನು ಆ ವಾದ್ಯದ ತಂತಿಗಳನ್ನಾಗಿ ಮಾಡು ಮತ್ತು ನನ್ನ ಬೆರಳುಗಳನ್ನೇ ಅದನ್ನು ನುಡಿಸುವ ಕಡ್ಡಿಯನ್ನಾಗಿ ಪರಿವರ್ತಿಸು.ಸಂಗೀತದ ನಾದ: ಹೇ ಕೂಡಲಸಂಗಮದೇವ, ನನ್ನನ್ನು ನಿನ್ನ ಎದೆಗೆ ಒತ್ತಿ ಹಿಡಿದು, ನಿನಗೆ ಇಷ್ಟ ಬಂದಂತೆ ಮೂವತ್ತೆರಡು ಬತ್ತೀಸ ರಾಗಗಳನ್ನು ಮಂಜುಳವಾಗಿ ನುಡಿಸು. ನನ್ನ ಜೀವನದ ಪ್ರತಿ ಕ್ಷಣವೂ ನಿನ್ನ ನಾದಮಯವಾಗಿರಲಿ ಎಂಬುದು ಇದರ ಆಶಯವಾಗಿದೆ.ಅಂದರೆ, "ನನ್ನಲ್ಲಿ ಯಾವುದೇ ಅಹಂಕಾರ ಉಳಿಯಬಾರದು, ನಾನು ಸಂಪೂರ್ಣವಾಗಿ ನಿನ್ನ ಇಚ್ಛೆಯಂತೆ ನಡೆಯುವ ನಿಮಿತ್ತ ಮಾತ್ರನಾಗಬೇಕು" ಎಂಬ ಪರಮ ಭಕ್ತಿಯ ಶರಣಾಗತಿಯ ಭಾವ ಇಲ್ಲಿದೆ. ಇಂಥಹ ವಚನಗಳು ಮನುಕುಲಕ್ಕೆ ದಾರಿದೀಪವಾಗಿವೆ. ನಾವು ನೀವು ವಚನದ ದಾರಿಯಲ್ಲಿ ಸಾಗೋಣ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

ಇಂದು ಸಿಂಧನೂರಿನಲ್ಲಿ ಗುರುಶ್ರೇಷ್ಠ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ತಾಲ್ಲೂಕು ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಒಕ್ಕೂಟದಿಂದ ಕಾರ್ಯಕ್ರಮ ಆಯೋಜನೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ಹಾಗೂ ಉಪನ್ಯಾಸಕರ ಕಾರ್ಯವನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ತಾಲ್ಲೂಕು ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಒಕ್ಕೂಟ, ಸಿಂಧನೂರು ವತಿಯಿಂದ ಗುರುಶ್ರೇಷ್ಠ ಪ್ರಶಸ್ತಿ ಪ್ರದಾನ ಹಾಗೂ ನೂತನ ಪದಾಧಿಕಾ-ರಿಗಳ ಪದಗ್ರಹಣ ಸಮಾರಂಭವನ್ನು ಅಕ್ಟೋಬರ್ 12ರಂದು ಸೋಮವಾರ ಸಂಜೆ 4 ಗಂಟೆಗೆ ಸಿಂಧನೂರಿನ ಸತ್ಯ ಗಾರ್ಡನ್‌ನಲ್ಲಿ ಆಯೋಜಿಸಲಾಗಿದೆ.ಶಿಕ್ಷಣವು ಸಮಾಜದ ಪ್ರಗತಿಯ ಪ್ರಮುಖ ಅಡಿಪಾಯವಾಗಿದ್ದು, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರು ಮತ್ತು ಉಪನ್ಯಾಸಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವಿದ್ಯಾರ್ಥಿಗಳಲ್ಲಿ ಜ್ಞಾನ, ಶಿಸ್ತು, ಮೌಲ್ಯಗಳು ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವ ಮೂಲಕ ಉತ್ತಮ ಸಮಾಜ ನಿರ್ಮಾಣ-ಕ್ಕೆ ಶ್ರಮಿಸುತ್ತಿರುವ ಶಿಕ್ಷಣ ಕ್ಷೇತ್ರದ ಸಾಧಕರನ್ನು ಗುರುತಿಸಿ ಗೌರವಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲ್ಲೂಕು ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಪರಶುರಾಮ ಮಲ್ಲಾಪುರ ಅವರು ವಹಿಸಲಿದ್ದು, ಉದ್ಘಾಟನೆಯನ್ನು ಜಿಲ್ಲಾ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹಂಪನಗೌಡ ಬಾದರ್ಲಿ,ಶಾಸಕರು ಅವರು ನೆರವೇರಿಸಲಿದ್ದಾರೆ.ಸಮಾರಂಭದಲ್ಲಿ ಗಣ್ಯರಾದ ಸನ್ಮಾನ್ಯ ಶ್ರೀ ಕೆ.ವಿರುಪಾಕ್ಷಪ್ಪ, ಮಾಜಿ ಸಂಸದರು, ಸಿಂಧನೂರು,ಸನ್ಮಾನ್ಯ ಶ್ರೀ ವೆಂಕಟರಾವ್ ನಾಡಗೌಡ್ರು, ಮಾಜಿ



ಸಚಿವರು, ಸಿಂಧನೂರು,ಸನ್ಮಾನ್ಯ ಶ್ರೀ ಬಸನಗೌಡ ಬಾದರ್ಲಿ, ವಿಧಾನ ಪರಿಷತ್ ಸದಸ್ಯರು, ಸಿಂಧನೂರು,ಸನ್ಮಾನ್ಯ ಶ್ರೀ ಎಮ್. ದೊಡ್ಡಬಸವರಾಜ್, ಉಪಾಧ್ಯಾಕ್ಷರು, ಜಿಲ್ಲಾ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ, ಸಿಂಧನೂರು,ಸನ್ಮಾನ್ಯ ಶ್ರೀ ಸೋಮಶೇಖರಪ್ಪ ಹೊಕ್ರಾಣಿ, ಉಪನಿರ್ದೇಶಕರು ಪ.ಪೂ ಶಿಕ್ಷಣ ಇಲಾಖೆ.ಸಿಂಧನೂರು,ಸನ್ಮಾನ್ಯ ಶ್ರೀ ವೈ ನರೇಂದ್ರನಾದ್, ಅಧ್ಯಕ್ಷರು, ತಾಲೂಕ ಖಾಸಗಿ ಶಾಲಾ ಕಾಲೇಜುಗಳ ಒಕ್ಕೂಟ ಸಿಂಧನೂರು.,ಸನ್ಮಾನ್ಯ ಡಾ.ಚನ್ನನಗೌಡ. ಆರ್. ಪಾಟೀಲ್, ಗೌರವಾಧ್ಯಕ್ಷರು, ತಾಲೂಕ ಖಾಸಗಿ ಕಾಲೇಜುಗಳ ಒಕ್ಕೂಟ ಸಿಂಧನೂರು,ಸನ್ಮಾನ್ಯ ಶ್ರೀ ಎನ್.ಪಿ.ವಿಷ್ಣುವರ್ಧನ ರೆಡ್ಡಿ, ಗೌರವಾಧ್ಯಕ್ಷರು, ತಾಲೂಕ ಖಾಸಗಿ ಕಾಲೇಜುಗಳ ಒಕ್ಕೂಟ ಸಿಂಧನೂರು,ಸನ್ಮಾನ್ಯ ಶ್ರೀ ಸೋಮನಗೌಡ ಬಾದರ್ಲಿ, ಗೌರವಾಧ್ಯಕ್ಷರು, ತಾಲೂಕ ಖಾಸಗಿ ಕಾಲೇಜುಗಳ ಒಕ್ಕೂಟ ಸಿಂಧನೂರು,ಸನ್ಮಾನ್ಯ ಶ್ರೀ ಸತೀಶ್.ಎನ್, ನಿಕಟ ಪೂರ್ವ ಅಧ್ಯಕ್ಷರು, ತಾಲೂಕ ಖಾಸಗಿ ಕಾಲೇಜುಗಳ ಒಕ್ಕೂಟ ಸಿಂಧನೂರು,ಸನ್ಮಾನ್ಯ ಶ್ರೀ ವೆಂಕಟೇಶ್ವರಲು, ಗೌರವ ಸಲಹೆಗಾರರು, ತಾಲೂಕ ಖಾಸಗಿ ಕಾಲೇಜುಗಳ ಒಕ್ಕೂಟ ಸಿಂಧನೂರು,ಸನ್ಮಾನ್ಯ ಶ್ರೀ ತಿಮ್ಮಣ್ಣ ರಾಮತ್ನಾಳ, ಕಾರ್ಯದರ್ಶಿಗಳು, ತಾಲೂಕ ಖಾಸಗಿ ಕಾಲೇಜುಗಳ ಒಕ್ಕೂಟ ಸಿಂಧನೂರು. ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿರಲಿದ್ದಾರೆ.ಹಾಗೂ ವಿಶೇಷ ಸನ್ಮಾನಿತರಾಗಿ ಶ್ರೀ ಎನ್. ಸತ್ಯನಾರಾಯಣ ಶ್ರೇಷ್ಠಿ ಸದಸ್ಯರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ. ಬೆಂಗಳೂರು,ಶ್ರೀ ಅನಿಲ್ ಕುಮಾರ್. ಆರ್ ಸದಸ್ಯರು, ವಿದ್ಯಾವಿಷಯಕ ಪರಿಷತ್ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ರಾಯಚೂರು,ಶ್ರೀ ಚಂದ್ರಶೇಖರ್ ಬೆನ್ನೂರ್ ಕರ್ನಾಟಕ ರಾಜ್ಯ ಮಾಧ್ಯಮ ಅಕಾಡೆಮಿಯ ಅಭಿಮನ್ಯು ದತ್ತಿ ಪ್ರಶಸ್ತಿ ಪುರಸ್ಕೃತರು, ಸಿಂಧನೂರು ಹಾಗೂ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ, ಗುಣಮಟ್ಟದ ಶಿಕ್ಷಣದ ವಿಸ್ತರಣೆ, ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣ ಕಲ್ಪಿಸುವುದು ಹಾಗೂ ಶಿಕ್ಷಕರ ವೃತ್ತಿಪರ ಸಾಮರ್ಥ್ಯವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ವಹಿಸುತ್ತಿರುವ ಪಾತ್ರದ ಕು-ರಿತು ಈ ಸಂದರ್ಭದಲ್ಲಿ ಚರ್ಚೆ ನಡೆಯುವ ನಿರೀಕ್ಷೆಯಿದೆ.ಶಿಕ್ಷಣ ಕ್ಷೇತ್ರದಲ್ಲಿ ನಿಷ್ಠೆ, ಬದ್ಧತೆ ಹಾಗೂ ಸಮರ್ಪಣಾ ಮನೋಭಾವದಿಂದ ಸೇವೆ ಸಲ್ಲಿಸುತ್ತಿರುವ ಸಾಧಕರಿಗೆ ಗುರುಶ್ರೇಷ್ಠ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಶಿಕ್ಷಕರ ಸೇವೆಯನ್ನು ಗೌರವಿಸುವ ಇಂತಹ ಕಾರ್ಯಕ್ರಮಗಳು ಇತರ ಶಿಕ್ಷಕ-ರಿಗೂ ಪ್ರೇರಣೆ ನೀಡುವುದರ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ಇನ್ನಷ್ಟು ಉತ್ಸಾಹದಿಂದ ಕಾರ್ಯನಿರ್ವಹಿಸಲು ಉತ್ತೇಜನ ನೀಡಲಿವೆ.ಗುರುಗಳು ಕೇವಲ ಪಠ್ಯಪುಸ್ತಕದ ಜ್ಞಾನವನ್ನು ನೀಡುವವರಲ್ಲ; ವಿದ್ಯಾರ್ಥಿಗಳ ಜೀವನಕ್ಕೆ ಸರಿಯಾದ ದಿಕ್ಕು ತೋರಿಸುವ ಮಾರ್ಗದರ್ಶಕರು. ಅವರ ಪರಿಶ್ರಮ, ತ್ಯಾಗ ಮತ್ತು ಸೇವೆಯನ್ನು ಗುರುತಿಸಿ ಗೌರವಿಸುವುದು ಸಮಾಜದ ಕರ್ತವ್ಯವಾಗಿದೆ ಎಂಬ ಆಶಯದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.ಗುರುಶ್ರೇಷ್ಠ ಪ್ರಶಸ್ತಿ ಪ್ರದಾನ ಸಮಾರಂಭದೊಂದಿಗೆ ತಾಲ್ಲೂಕು ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಒಕ್ಕೂಟದ ನೂತನ ಪದಾಧಿಕಾ-ರಿಗಳ ಪದಗ್ರಹಣ ಕಾರ್ಯಕ್ರಮವೂ ನಡೆಯಲಿದೆ. ನೂತನ ಪದಾಧಿಕಾರಿಗಳು ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ, ಉಪನ್ಯಾಸಕರ ಸಮಸ್ಯೆಗಳಿಗೆ ಸ್ಪಂದಿಸುವುದು, ಶಿಕ್ಷಣ ಕ್ಷೇತ್ರದ ಸವಾಲುಗಳನ್ನು ಎದುರಿಸುವುದು ಹಾಗೂ ಸಂಸ್ಥೆಗಳ ನಡುವೆ ಉತ್ತಮ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ನಿರೀಕ್ಷೆಯಿದೆ.ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಪರಸ್ಪರ ಸಹಕಾರದೊಂದಿಗೆ ಕಾರ್ಯನಿರ್ವಹಿಸಿದಾಗ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವುದರ ಜೊತೆಗೆ ಶೈಕ್ಷಣಿಕ ಕ್ಷೇತ್ರದ ಒಟ್ಟಾರೆ ಪ್ರಗತಿಗೂ ಸಹಕಾರಿಯಾಗಲಿದೆ.ಕಾರ್ಯಕ್ರಮಕ್ಕೆ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಪ್ರತಿನಿಧಿಗಳು, ವಿವಿಧ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ಶಿಕ್ಷಕರು ಹಾಗೂ ಶಿಕ್ಷಣಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಾಲ್ಲೂಕು ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಒಕ್ಕೂಟ, ಸಿಂಧನೂರು ವತಿಯಿಂದ ಮನವಿ

ಪ್ರತಿಭಟನೆ ನಡೆಸುವುದಿಲ್ಲವೆಂದು ಯಾವುದೇ ಬಾಂಡ್‌ಗೆ ಸಹಿ ಹಾಕಿಲ್ಲ: ಸಿಜೆಪಿ ನಾಯಕ ಅಭಿಜೀತ್ ದೀಪ್ಕೆ ಸ್ಪಷ್ಟನೆ

❑ ನೈಜ್ಯ ದೆಸೆ ನ್ಯೂಸ್



ನವದೆಹಲಿ : ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಆಗ್ರಹಿಸಿ ಸಿಪಿಜೆ ಆಯೋಜಿಸಿದ್ದ ಪ್ರತಿಭಟನೆಯ ವೇಳೆ ದೆಹಲಿ ಪೊಲೀಸರಿಂದ ಮುನ್ನೆಚ್ಚ-ರಿಕೆ ಬಂಧನಕ್ಕೊಳಗಾಗಿ, ನಂತರ ಬಿಡುಗಡೆಯಾಗಿರುವ ಸಿಪಿಜೆ ನಾಯಕ ಅಭಿಜೀತ್ ದೀಪ್ಕೆ ತಾವು ಭವಿಷ್ಯದಲ್ಲಿ ಪ್ರತಿಭಟನೆ ನಡೆಸದಂತೆ ತಡೆಯುವ ಯಾವುದೇ ಬಾಂಡ್‌ಗೆ ಸಹಿ ಹಾಕಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅಭಿಜೀತ್ ದೀಪ್ಕೆ ಸೌರವ್ ದಾಸ್ ಮತ್ತು ಅಶುತೋಷ್ ರಾಂಕಾ ಅವರನ್ನು ದೆಹಲಿ ಪೊಲೀಸರು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (BNSS) ಅಡಿಯಲ್ಲಿ ಬಂಧಿಸಿ ದೆಹಲಿ ಕ್ಯಾಂಟ್‌ನ ಎಸ್‌ಇಎಂ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. -50,000 ಗಳ ಶೂರಿಟಿ ಬಾಂಡ್ ಆಧಾರದ ಮೇಲೆ, ಒಂದು ವರ್ಷದ ಅವಧಿಗೆ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಶರತ್ತಿನ ಮೇಲೆ ನ್ಯಾಯಾಲಯ ಅವರಿಗೆ ಜಾಮೀನು ಮಂಜೂರು ಮಾಡಿದೆ. ಆದರೆ ಪ್ರತಿಭಟನೆಯೇ ನಡೆಸಲ್ಲವೆಂದು ಬಾಂಡ್‌ಗೆ ಸಹಿ ಹಾಕಿದ್ದಾರೆ ಎಂಬ ಸುಳ್ಳು ಸುದ್ದಿ ಹರಡುತ್ತಿದೆ.ಜಾಮೀನಿನ ಮೇಲೆ ಬಿಡುಗಡೆಯಾದ ನಂತರ ಮಾಧ್ಯಮ, ಸಾಮಾಜಿಕ ಜಾಲತಾಣಗಳ ಮೂಲಕ ಪ್ರತಿಕ್ರಿಯಿಸಿದ ಅಭಿಜೀತ್ ದೀಪ್ಕೆ "ನಾವು ಬಿಡುಗಡೆಯಾಗಲು ಸಹಿ ಮಾಡಿರುವುದು ಕೇವಲ ಸಾರ್ವಜನಿಕ ಶಾಂತಿ ಕಾಪಾಡುವ ಬಾಂಡ್‌ಗೆ ಹೊರತು, ಪ್ರತಿಭಟನೆ ಅಥವಾ ಹೋರಾಟ ತಡೆಯುವ ನಿಷೇಧಕ್ಕಲ್ಲ. ಭವಿಷ್ಯದಲ್ಲಿ ನಾವು ಮತ್ತೆ ರಸ್ತೆಗಿಳಿದು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಮ್ಮ ಪ್ರತಿಭಟನೆಯನ್ನು ಮುಂದುವ-ರಿಸಲಿದ್ದೇವೆ" ಎಂದು ಹೇಳಿದ್ದಾರೆ.ಸಿಪಿಜೆ ಸಂಘಟನೆಯು ದೆಹಲಿಯ ಜಂತರ್ ಮಂತರ್ ಬಳಿ ಬೃಹತ್ ಪ್ರತಿಭಟನೆಗೆ ಕರೆ ನೀಡಿತ್ತು. ಆದರೆ ದೆಹಲಿ ಪೊಲೀಸರು ಈ ಪ್ರತಿಭಟನೆಗೆ ಅನುಮತಿ ನಿರಾಕರಿಸಿ, ನಾಯಕರನ್ನು ವಿಮಾನ ನಿಲ್ದಾಣದಿಂದಲೇ ವಶಕ್ಕೆ ಪಡೆದಿದ್ದರು.


ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9902277588

ಸಿಂಧನೂರಿನಲ್ಲಿ CIO ವಿಜ್ಞಾನ ಒಲಿಂಪಿಯಾಡ್ ಯಶಸ್ವಿ

200ಕ್ಕೂ ಹೆಚ್ಚು ವಿದ್ಯಾರ್ಥಿಗಳ ಭಾಗಿ; ವೈಜ್ಞಾನಿಕ ಚಿಂತನೆ, ತಾರ್ಕಿಕ ಶಕ್ತಿಗೆ ವೇದಿಕೆಯಾದ ಸ್ಪರ್ಧಾತ್ಮಕ ಪರೀಕ್ಷೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು,:ಮಕ್ಕಳಲ್ಲಿವೈಜ್ಞಾನಿಕಮನೋಭಾವ, ತಾರ್ಕಿಕ ಚಿಂತನೆ ಹಾಗೂ ಜ್ಞಾನವನ್ನು ಬೆಳೆಸುವ ಉದ್ದೇಶದಿಂದ ಮಕ್ಕಳ ಇಸ್ಲಾಮಿಕ್ ಸಂಸ್ಥೆ (CIO) ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ವಿಜ್ಞಾನ ಒಲಿಂಪಿಯಾಡ್-2026 ಸಿಂಧನೂರಿನಲ್ಲಿ ಯಶಸ್ವಿಯಾಗಿ ಜರುಗಿ-ತು.ನಗರದ ಮಹಬೂಬಿಯಾ ಕಾಲನಿಯ ಇಕ್ರಾ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಅಕ್ಟೋಬರ್ 11ರಂದು ನಡೆದ ಪರೀಕ್ಷೆಯಲ್ಲಿ 6ನೇ, 7ನೇ ಮತ್ತು 8ನೇ ತರಗತಿಗಳ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದರು. ಕನ್ನಡ, ಇಂಗ್ಲಿಷ್ ಮತ್ತು ಉರ್ದು ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿ-ತ್ತು.ಒಲಿಂಪಿಯಾಡ್ ಆಯೋಜನೆಗಾಗಿ ಅಖಔ ಸಿಂಧನೂರು ಘಟಕವು ಸುಮಾರು ಒಂದು ತಿಂಗಳಿನಿಂದ ಸಿದ್ಧತೆ ನಡೆಸಿತ್ತು. ನಗರದ ವಿವಿಧ ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಉದ್ದೇಶ ಮತ್ತು ಮಹತ್ವದ ಕು-ರಿತು ಮಾಹಿತಿ ನೀಡಿ, ಭಾಗವಹಿಸಲು ಪ್ರೋತ್ಸಾಹಿಸಲಾಯಿತು. ಈ ಪ್ರಯತ್ನದ ಫಲವಾಗಿ ಒಟ್ಟು 247 ವಿದ್ಯಾರ್ಥಿಗಳು






ನೋಂದಾಯಿಸಿಕೊಂಡಿದ್ದು, ಅವರಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದರು.ಪ-ರೀಕ್ಷೆ ಸುಗಮವಾಗಿ ನಡೆಯಲು ಸುಮಾರು 10 ಕೊಠಡಿಗಳ ವ್ಯವಸ್ಥೆ ಮಾಡಲಾಗಿತ್ತು. ವಿದ್ಯಾರ್ಥಿಗಳ ನೋಂದಣಿ, ಆಸನ ವ್ಯವಸ್ಥೆ ಹಾಗೂ ಕೊಠಡಿ ಮೇಲ್ವಿಚಾರಣೆಯನ್ನು ಕ್ರಮಬದ್ಧವಾಗಿ ನಿರ್ವಹಿಸಲಾಯಿತು. ಮೇಲ್ವಿಚಾರಕರು ಮತ್ತು ಸ್ವಯಂಸೇವಕರು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿದರು. ಪರೀಕ್ಷೆಯ ನಂತರ ಎಲ್ಲ ವಿದ್ಯಾರ್ಥಿಗಳಿಗೆ ಬಾಳೆಹಣ್ಣುಗಳನ್ನು ವಿತರಿಸಲಾಯಿತು.ಪರೀಕ್ಷೆಯು ಕೇವಲ ಕಂಠಪಾಠಕ್ಕೆ ಸೀಮಿತವಾಗದೆ, ವಿದ್ಯಾರ್ಥಿಗಳ ತಾರ್ಕಿಕ ಸಾಮರ್ಥ್ಯ, ವಿಮರ್ಶಾತ್ಮಕ ಚಿಂತನೆ ಹಾಗೂ ವೈಜ್ಞಾನಿಕ ಜ್ಞಾನದ ಅನ್ವಯಿಕತೆಗೆ ಆದ್ಯತೆ ನೀಡಿತ್ತು. ಪರೀಕ್ಷೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ತಮ್ಮ ಅನುಭವದ ಕುರಿತು ಸಂತಸ ವ್ಯಕ್ತಪಡಿಸಿದರು.ಇಂತಹ ಸ್ಪರ್ಧಾತ್ಮಕ ಪರೀಕ್ಷೆಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆಸುವುದರ ಜೊತೆಗೆ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ಮತ್ತು ಭವಿಷ್ಯದ ಶೈಕ್ಷಣಿಕ ಸವಾಲುಗಳನ್ನು ಎದುರಿಸಲು ಸಹಕಾ-ರಿಯಾಗುತ್ತವೆ.ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ CIO ಸಂಸ್ಥೆ, ಭಾಗವಹಿಸಿದ ಶಾಲೆಗಳು, ಇಕ್ರಾ ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು, ಮೇಲ್ವಿಚಾರಕರು, ಸ್ವಯಂಸೇವಕರು, ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ CIO ಸಿಂಧನೂರು ಘಟಕವು ಕೃತಜ್ಞತೆ ಸಲ್ಲಿಸಿದೆ. ಮುಂದಿನ ದಿನಗಳಲ್ಲಿಯೂ ಮಕ್ಕಳ ಪ್ರತಿಭೆ, ಜ್ಞಾನ ಮತ್ತು ಸಮಗ್ರ ಬೆಳವಣಿಗೆಗೆ ಪೂರಕವಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಉದ್ದೇಶ ಹೊಂದಲಾಗಿದೆ ಎಂದು ಘಟಕದ ಪ್ರತಿನಿಧಿಗಳು ತಿಳಿಸಿದ್ದಾರೆ.ಅಲ್ಹಮ್ದುಲಿಲ್ಲಾಹ್! ವಿಜ್ಞಾನ ಒಲಿಂಪಿಯಾಡ್‌ನ ಯಶಸ್ಸು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಆತ್ಮವಿಶ್ವಾಸ ಬೆಳೆಸುವ ಮಹತ್ವದ ಹೆಜ್ಜೆಯಾಗಿದ್ದು, ಭವಿಷ್ಯದಲ್ಲಿಯೂ ಇಂತಹ ಶೈಕ್ಷಣಿಕ ಚಟುವಟಿ-ಕೆಗಳನ್ನು ಮುಂದುವರಿಸುವ ಸಂಕಲ್ಪವನ್ನು CIO ಸಿಂಧನೂರು ಘಟಕ ಹೊಂದಿದೆ.

ಬಸ್‌ಗಳನ್ನೇ ಜೈಲುಗಳನ್ನಾಗಿ ಪರಿವರ್ತಿಸಲಾಗುತ್ತಿದೆಯೇ? ಕಸ್ಟಡಿ ವಾಹನದ ಪರಿಸ್ಥಿತಿ ಬಿಚ್ಚಿಟ್ಟ ನೇಹಾ ಬೋರಾ

❑ ನೈಜ್ಯ ದೆಸೆ ನ್ಯೂಸ್

ನವದೆಹಲಿ : ಏಕಪಕ್ಷೀಯ ನಿರ್ಧಾರ ಕೈಗೊಂಡ ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ದೆಹಲಿಯ ಜಂತರ್ ಮಂತರ್, ವಿಜಯ್ ಚೌಕ್ ಸುತ್ತಮುತ್ತ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿ ನಾಯಕರು, ರಾಜಕೀಯ ಕಾರ್ಯಕರ್ತರನ್ನು ದೆಹಲಿ ಪೊಲೀಸರು ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ವಶಕ್ಕೆ ಪಡೆದುಕೊಂಡಿದ್ದಾರೆ. ಈ ವೇಳೆ ವಶಕ್ಕೆ ಪಡೆದವರನ್ನು ಕರೆದೊಯ್ಯಲು ಪೊಲೀಸರು ಬಳಸಿದ 'ಡಿಟೆಂಷನ್ ಬಸ್‌ಗಳ ಸ್ವರೂಪ ಮತ್ತು ಸ್ಥಿತಿಯ ಬಗ್ಗೆ ಆಲ್ ಇಂಡಿಂ-ಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ ರಾಷ್ಟ್ರೀಯ ಅಧ್ಯಕ್ಷೆ ನೇಹಾ ಬೋರಾ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.ತಮ್ಮ ಸಾಮಾಜಿಕ ಜಾಲತಾಣ (ಟ್ವಿಟರ್) ಖಾತೆಯಲ್ಲಿ ಕಸ್ಟಡಿ ಬಸ್ ಒಳಗಿನಿಂದ ವಿಡಿಯೋ ತುಣುಕೊಂದನ್ನು ಹಂಚಿಕೊಂಡಿರುವ



ನೇಹಾ ಬೋರಾ, ಪೊಲೀಸರ ಈ ನಡೆ ಮತ್ತು ವಾಹನಗಳ ವಿನ್ಯಾಸವನ್ನು ಕಟುವಾಗಿ ಪ್ರಶ್ನಿಸಿದ್ದಾರೆ."ಈ ಬಸ್ಸಿನೊಳಗೆ ಜೈಲಿನ ಸೆಲ್‌ಗಳಂತೆ ನಾಲ್ಕು ಸಣ್ಣ ಸಣ್ಣ ಕೊಠಡಿಗಳನ್ನು ಮಾಡಲಾಗಿದೆ, ಅವುಗಳಿಗೆ ಚಿಲಕಗಳಿರುವ ಬಾಗಿಲುಗಳಿವೆ. ಇಲ್ಲಿ ಉಸಿರಾಡಲು ಸಹ ಸರಿಯಾಗಿ ಸ್ಥಳವಿಲ್ಲ. ಒಂದು ಬದಿಯಲ್ಲಿ ಸರಳುಗಳು ಮತ್ತು ಗಾಜಿನ ಫಲಕಗಳನ್ನು ಅಳವಡಿಸಲಾಗಿದೆ. ಪ್ರತಿಭಟನಾಕಾರರನ್ನು ಇಲ್ಲಿ ನೆಲದ ಮೇಲೆಯೇ ಕೂಡಿಸಲಾಗಿದೆ. ವಿಚಾರಣೆಗೆ ಅಥವಾ ಕಸ್ಟಡಿಗೆ ಕರೆದೊಯ್ಯುವ ಮುನ್ನವೇ ಈ ಡಿಟೆಂಷನ್ ಬಸ್‌ಗಳನ್ನು ಜೈಲುಗಳನ್ನಾಗಿ ಪರಿವರ್ತಿಸುವುದು ದೆಹಲಿ ಪೊಲೀಸ್ ಮತ್ತು ಸಿಆರ್‌ಪಿಎಫ್‌ನ ಉದ್ದೇಶವೇ? ಈ ಡಿಟೆಂಷನ್ ಬಸ್‌ಗಳೇ ಹೊಸ ಜೈಲುಗಳೇ?" ಎಂದು ನೇಹಾ ಬೋರಾ ಪ್ರಶ್ನಿಸಿದ್ದಾರೆ.ಅಲ್ಲದೆ, ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಸಾಮಾನ್ಯ ಜನರ ವಿರುದ್ಧ ಪೊಲೀಸರು ಅತಿಯಾದ ಬಲಪ್ರಯೋಗ ಮತ್ತು ಹಿಂಸಾಚಾರ ನಡೆಸುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.ರಾಜಧಾನಿ ದೆಹಲಿಯಲ್ಲಿ ಜಂತರ್ ಮಂತರ್ ಕಡೆಗೆ ಮೆರವಣಿಗೆ ಸಾಗದಂತೆ ತಡೆಯಲು ದೆಹಲಿ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ ಬಿಗಿ ಭದ್ರತೆ ಕೈಗೊಂಡಿದ್ದರು. ಈ ವೇಳೆ ಸಿಪಿಐ(ಎಂ) ಸಂಸದ ಜಾನ್ ಬ್ರಿಟ್ಟಾಸ್, ಸಿಪಿಐ(ಎಮ್‌ಎಲ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಯೋಗೇಂದ್ರ ಯಾದವ್, ಪ್ರಶಾಂತ್ ಭೂಷಣ್ ಸೇರಿದಂತೆ ಹಲವು ನಾಯಕರು ಮತ್ತು ವಿದ್ಯಾರ್ಥಿ ಸಂಘಟನೆಗಳ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101